
ಕೊಂದ ದಂ

ನಾಟಕ



ಸಿ.ಪಿ.ನಾಗರಾಜ

ಹೆಣದ ಹಣ ನಾಟಕದ ಬಗ್ಗೆ ಅಭಿಪ್ರಾಯಗಳು

ದುರ್ಮರಣವೇ ದುಃಖಕರ-ಚಿಕ್ಕ ವಯಸ್ಸಿನ ತರುಣ ಮಕ್ಕಳಂತೂ ಹಾಗೆ ಸತ್ತರೆ ಆ ಕಣ್ಣೀರಿನ ಕತೆಯನ್ನು ಹೇಳಲಸದಳ. ಅದರ ನಡುವೆಯೇ ಭ್ರಷ್ಟ ಉದ್ಯೋಗಿಗಳು ಲಂಚಕ್ಕಾಗಿ ನಾನಾ ವಿಧವಾಗಿ ಒತ್ತಾಯಿಸಿ ಅಮಾಯಕ ಜನರಿಗೆ ಕೊಡುವ ಕಿರುಕುಳ ತೀರಾ ಅನಾಗರಿಕ ಮತ್ತು ಅಮಾನವೀಯ. ಅದನ್ನು ಪ್ರತಿಭಟಿಸಲೆಂದೇ ಅತ್ಯುಗ್ರವಾದ ಸತ್ಯಾಗ್ರಹದಿಂದ, ಅದರ ಅಭಿವ್ಯಕ್ತಿಗೆ ತಕ್ಕುದಾಗಿ ಕುದಿಯುವ ಭಾಷೆಯಿಂದ, ಉಕ್ಕುವ ಸಂಭಾಷಣೆಯಿಂದ ಅತ್ಯಂತ ವಾಸ್ತವಿಕವಾಗಿ ಈ ನಾಟಕವನ್ನು ನೀವು ನಿರೂಪಿಸಿದ್ದೀರಿ. **-ಎಲ್. ಬಸವರಾಜು**

ಮನುಷ್ಯ ಕ್ರೂರಿಯಾಗುತ್ತ ಹೋಗುತ್ತಿರುವ ಇಂದಿನ ದಿನಗಳಲ್ಲಿ ಅವನನ್ನು ಸರಿದಾರಿಗೆ ತರುವುದೇ ಸಾಧ್ಯವಿಲ್ಲವೇನೋ ಅನಿಸುತ್ತಿದೆ. ನಿಮ್ಮ ನಾಟಕ ಈ ಬಗ್ಗೆ ವಿಚಾರ ಮಾಡಲು ಹಚ್ಚುತ್ತದಲ್ಲ ಎಂಬುದೇ ಸಂತಸದ ವಿಷಯ. **-ನಾ.ಡಿಸೋಜ**

ನಾಟಕ ಸುಲಭವಾಗಿ ಓದಿಸಿಕೊಳ್ಳುತ್ತದೆ. ಮಂಡ್ಯ ಜಿಲ್ಲೆಯ ಆಡುಭಾಷೆಯು ನಾಟಕದ ಜೀವಾಳವಾಗಿದೆ. ವಸ್ತುವಿನ ಆಯ್ಕೆ ಮತ್ತು ನಿರೂಪಣೆಯಲ್ಲಿ ಹೊಸತನವಿದೆ, ಲವಲವಿಕೆಯಿದೆ. ಸಮಾಜ ಶುದ್ಧೀಕರಣದ ಹಿನ್ನೆಲೆಯಲ್ಲಿ ಇಂತಹ ಅಭಿವ್ಯಕ್ತಿ ಸ್ವಲ್ಪವಾದರೂ ಪರಿಣಾಮ ಬೀರುತ್ತದೆ.

-ಡಿ. ಲಿಂಗಯ್ಯ

ನಿಮ್ಮ ಹೊಸ ನಾಟಕ 'ಹೆಣದ ಹಣ' ಓದಿದೆ. ನಿಮ್ಮನ್ನು ಬದುಕಿನ ಭ್ರಷ್ಟತೆ ತುಂಬಾ ಕಾಡುತ್ತಿದೆ. ಈ ಭ್ರಷ್ಟತೆಗೂ ನಮ್ಮ ಸಾಮಾಜಿಕ ಧಾರ್ಮಿಕ ನೈತಿಕ ಮೌಲ್ಯಗಳಿಗೂ ನೇರ ಸಂಬಂಧವಿದೆ. ಇವುಗಳ ಶೋಧ ನಡೆಸಬೇಕಾಗಿದೆ. ನಿಮ್ಮ ಈ ನಾಟಕದ ವಿಶೇಷವೆಂದರೆ-ನಿಮ್ಮ ಬೆಳವಣಿಗೆಯೂ ಹೌದು-ಸಾಮಾಜಿಕ ಶೋಧ ಆತ್ಮಶೋಧವೂ ಆದಾಗ ಮಾತ್ರ ವ್ಯಕ್ತಿತ್ವ ವಿಕಾಸ ಸಾಧ್ಯವೆಂಬ ಆಶಯಕ್ಕೆ ಬಂದಿರುವುದು. ನಿಮ್ಮ ಹಿಂದಿನ ನಾಟಕಗಳ ಶೋಧ ಬಾಹ್ಯ ಪ್ರಪಂಚಕ್ಕೆ ಪ್ರಶ್ನೆಗಳನ್ನು ಹಾಕುವಂತಿದ್ದರೆ, ಇಲ್ಲಿ ಬಾಹ್ಯವನ್ನು ಒಳಗೊಂಡ ಅಂತರಂಗದ ಅವಲೋಕನಕ್ಕೆ ವಿಸ್ತರಿಸಿದೆ.

-ಶಿವರಾಮು ಕಾಡನಕುಪ್ಪೆ

ಹೆಣದ ಹಣ

(ರಚನೆ : 1996)

ಸಿ.ಪಿ.ನಾಗರಾಜ

ನಾಗು ಸ್ಮಾರಕ ಪ್ರಕಾಶನ

75, ‘ಎ’ ಬ್ಲಾಕ್, 5 ನೆಯ ಕ್ರಾಸ್, ಕ್ರಿಶ್ಣ ಗಾರ್ಡನ್,

ಆರ್.ವಿ.ಕಾಲೇಜು ಪೋಸ್ಟ್, ಬೆಂಗಳೂರು-560059. ಮೊ.9986347521.

ngy7777@gmail.com

ಪಾತ್ರವರ್ಗ

ತಮ್ಮಯ್ಯ---ತಂದೆ

ಬೋರಣ್ಣ---ಚಿಕ್ಕಪ್ಪ

ರಾಮಣ್ಣ
ನಿಂಗಣ್ಣ } ---ತಮ್ಮಯ್ಯನವರ ಊರಿನವರು
ಕತ್ತೆ ಜವರ

ಹಳ್ಳಿಗ-1

ಹಳ್ಳಿಗ-2

ಶಿವಲಿಂಗ---ಹಳ್ಳಿಯ ಯುವಕ ಸಂಘದ ಸದಸ್ಯ

ಚನ್ನೇಗೌಡ---ಹಳ್ಳಿಯ ಯುವಕ ಸಂಘದ ಸದಸ್ಯ

ರಾಜಣ್ಣ---ನಾಗರಿಕ ಸಮಿತಿಯ ಅಧ್ಯಕ್ಷ

ನರಸಿಂಹಯ್ಯ---ಅಧ್ಯಾಪಕ

ಡಾಕ್ಟರ್---ಸರ್ಕಾರಿ ಆಸ್ಪತ್ರೆಯ ವೈದ್ಯಾಧಿಕಾರಿ

ಕಾಂಪೌಂಡರ್---ಸರ್ಕಾರಿ ಆಸ್ಪತ್ರೆಯ ನೌಕರ

ವಾರ್ಡ್ ಬಾಯ್---ಸರ್ಕಾರಿ ಆಸ್ಪತ್ರೆಯ ನೌಕರ

ಇಬ್ಬರು ಪೋಲಿಸರು

ನಾಲ್ಕು ಮಂದಿ ದಾರಿಹೋಕರು

ಆರು ಮಂದಿ ಸಂಗಡಿಗರು

ಹೆಣದ ಹಣ

ಅಂಕ - ಒಂದು

[ಸರ್ಕಾರಿ ಆಸ್ಪತ್ರೆಯ ಆವರಣ, ಐದಾರು ಮಂದಿ ಗುಂಪಾಗಿ ನಿಂತು ಮಾತನಾಡಿಕೊಳ್ಳುತ್ತಿದ್ದಾರೆ. ಎಲ್ಲರ ಮುಖದಲ್ಲೂ ಆತಂಕ ಮತ್ತು ದುಃಖದ ಭಾವಗಳು ವ್ಯಕ್ತಗೊಳ್ಳುತ್ತಿವೆ. ಆಗ ಅಲ್ಲಿಗೆ ತಮ್ಮಯ್ಯನವರು ದೊಡ್ಡ ಧ್ವನಿಯಿಂದ ಅಳುತ್ತಾ ಬರುತ್ತಾರೆ]

ತಮ್ಮಯ್ಯ : ಅಯ್ಯೋ.... ಅಯ್ಯೋ.... ಮಗನೇ.... ನಮ್ ಬುಟ್ಬುಟ್ಟು ಹೊಂಟೋದೇನಪ್ಪ.... ಅಯ್ಯೋ.... ಅಯ್ಯೋ ದೇವರೇ....
[ದುಃಖದ ತೀವ್ರತೆಯಿಂದ ಕುಸಿದು ಕುಳಿತುಕೊಳ್ಳುತ್ತಾರೆ. ಗುಂಪಿನಲ್ಲಿದ್ದ ಒಂದಿಬ್ಬರು ತಮ್ಮಯ್ಯನವರನ್ನು ಸಮಾಧಾನ ಪಡಿಸಲು ಪ್ರಯತ್ನಿಸುತ್ತಾರೆ.]

ರಾಮಣ್ಣ : ಸುಮ್ನಿರಿ ತಮ್ಮಯ್ಯನೋರೆ, ಸ್ವಲ್ಪ ಸಮಾಧಾನ ಮಾಡ್ಕೊಳಿ. ಏನ್ ಮಾಡೋಕಾಗುತ್ತೆ? ನಮ್ ನಮ್ಮ ಪಾಲಿಗೆ ಬಂದುದ್ದನ್ನೆಲ್ಲಾ ಅನುಭವಿಸಲೇಬೇಕಲ್ಲ.

ತಮ್ಮಯ್ಯ : ಇದ್ದೊಬ್ಬ ಮಗನ್ನ ತಿನ್ಕೊಂಡು ಇನ್ನೆನಪ್ಪ ಅನುಭವಸ್ನೆ ?.... ಅಯ್ಯೋ ದೇವರೇ.... ನನ್ನನ್ನಾದ್ರು ಕರ್ಕೊಂಡು, ನನ್ನ ಮಗನ್ನ ಉಳ್ಸೂವಪ್ಪ.... ದೇವರೇ.... ದೇವರೇ....

ರಾಮಣ್ಣ : ನೀವು ಎಲ್ಲಾನು ತಿಳ್ದಿರೂರು.... ಹಿರಿಯೋರು.... ನೀವೆ ಹಿಂಗೆ ಅಳೂಕೆ ಶುರು ಮಾಡುದ್ರೆ ಹೆಂಗೆ? ಸಾಯೋದು ಬದ್ಕೋದು ನಮ್ಮ ಕೈಲಿದ್ದದೆ? ಎಲ್ಲಾ ಅವರವರು ತಂದ ಅದೃಷ್ಟ.

ತಮ್ಮಯ್ಯ : ಯಾವ ಅದೃಷ್ಟವೋ.... ಏನೋ?... ರಾಮಣ್ಣ, ನನ್ಮಗ ಎಲ್ಲಿದ್ದನಪ್ಪ? ನನ್ ಮಗನ್ನ ತೋರ್ಸಪ್ಪ. ಅಯ್ಯೋ ಮಗ್ನೆ, ನಿನ್ನೇ ನಂಬ್ಕೊಂಡಿದ್ನಲ್ಲಪ್ಪ. ನನ್ ವಂಶ ಉದ್ಧಾರ ಮಾಡೋ ಮಗ ಹುಟ್ಟವ್ನೆ ಅಂತ ಆಂಕಾರ ಪಡ್ತಿದ್ನಲ್ಲಪ್ಪ. ಇನ್ನೇನಪ್ಪ ಪಡನೇ? ಅಯ್ಯೋ ಮಗನೇ....

[ಅಲ್ಲಿದ್ದವರನ್ನೆಲ್ಲಾ ನೋಡುತ್ತಾ, ಅಂಗಲಾಚತೊಡಗುತ್ತಾರೆ.]

ನನ್ ಮಗನ್ನ ತೋರಿಸ್ರಪ್ಪ.... ನನ್ ಮಗನ್ನ ತೋರ್ಸಿ.

ರಾಮಣ್ಣ : ತೋರ್ಸ್ತೀಣ. ಮೊದ್ಲು ನೀವು ಸ್ವಲ್ಪ ಸಮಾಧಾನ ಮಾಡ್ಕೊಳಿ....

[ಅಲ್ಲಿದ್ದ ಒಬ್ಬ ವ್ಯಕ್ತಿಯನ್ನು ಕುರಿತು]
ನೋಡಯ್ಯ, ಹಿಂದ್ಗಡೆ ಇರೂ ಆ ರೂಮ್ ಹತ್ರ ಇವರನ್ನ ಕರ್ಕೊಂಡೋಗು.

[ತಮ್ಮಯ್ಯನವರನ್ನು ಕುರಿತು]
ನೀವು ನಡೀರಿ ಇವನ ಜೊತೇಲಿ.

[ತಮ್ಮಯ್ಯನವರು ತಲೆ ಮೇಲೆ ಕೈಹೊತ್ತು ಅಳುತ್ತಾ ಕುಳಿತಿರುತ್ತಾರೆ]....
ಎದ್ದೇಳಿ ಮತ್ತೆ ಈಗ. ಒಂದ್ಸತಿ ಹೋಗಿ ನೋಡ್ಕೊಂಡು ಬರೋಗಿ.

[ತಮ್ಮಯ್ಯನವರು ದುಃಖಿಸುತ್ತಲೇ ಮೇಲಕ್ಕೆದ್ದು, ರಂಗದ ಎಡಬದಿಯಿಂದ ನೇಪಥ್ಯಕ್ಕೆ ಒಬ್ಬ ವ್ಯಕ್ತಿಯೊಡನೆ ಹೋಗುತ್ತಾರೆ. ಅದೇ ಸಮಯಕ್ಕೆ ರಂಗದ ಬಲಬದಿಯಿಂದ ನಿಂಗಣ್ಣನೆಂಬ ವ್ಯಕ್ತಿ ಅಲ್ಲಿಗೆ ಆಗಮಿಸುತ್ತಾರೆ. ಬರುತ್ತಿದ್ದಂತೆಯೇ, ಅಲ್ಲಿದ್ದ ರಾಮಣ್ಣನವರನ್ನು ಕುರಿತು]

ನಿಂಗಣ್ಣ : ನಂಗೆ ಈಗ್ತಾನೆ ಸುದ್ದಿ ಗೊತ್ತಾಯ್ತು. ಮನೇಗೂ ಹೋಗ್ದೆ, ಹಿಂಗೆ ಬಂದೆ. ಹಂಗಾದ್ರೆ ಹುಡುಗ ಸತ್ತೆಹೋದ್ನೆ ?

ರಾಮಣ್ಣ : ಸ್ಪಾಟಲ್ಲೆ ಔಟಲ್ಲವೇ!

ನಿಂಗಣ್ಣ : ಎಲ್ಲಿ ಆಕ್ಸಿಡೆಂಟ್ ಆದುದ್ದು?

ರಾಮಣ್ಣ : ಅದೇ ಟಿ.ಬಿ. ಸರ್ಕಲ್ನಲ್ಲಿ.

ನಿಂಗಣ್ಣ : ಎಷ್ಟೊತ್ತಲ್ಲಿ?... ಹೆಂಗಾಯ್ತು?

ರಾಮಣ್ಣ : ಈ ಹುಡುಗ್ನು.... ಇವನ ಜೊತೆಗಾರ್ನು ಮಾರ್ನಿಂಗ್-ಶೋ ನೋಡೋಕೆ ಸ್ಕೂಟರಲ್ಲಿ ಪೇಟೆಗೆ ಬಂದಿದ್ರಂತೆ. ಸಿನಿಮಾ ನೋಡ್ಕೊಂಡು, ಮಧ್ಯಾಹ್ನ ಊರ್ಕಡೆ ಇತ್ಲಿಂದ ಹೊಯ್ತಿದ್ದಾಗ, ಅತ್ಲಿಂದ ಒಂದು ಲಾರಿ ಬತ್ತಿತಂತೆ. ಲಾರಿಗೆ ಅಡ್ಡಲಾಗಿ ಇದ್ದಕ್ಕಿದ್ದಂಗೆ ಒಂದು ಚಿಕ್ಕ ಹುಡುಗ ಸೈಕಲ್ ಬುಟ್ಕೊಂಡು

ಬಂದನಂತಲ್ಲಾ, ಆ ಹುಡುಗನ್ನ ಬಚಾವ್ ಮಾಡೋಕೆ ಅಂತ ಹೋಗಿ, ಇವರ ಮೇಲೆ ಲಾರಿ ಬುಟ್ಬುಟ್ಟಂತೆ.

ನಿಂಗಣ್ಣ : ಅಯ್ಯಯ್ಯೋ.... ಹಂಗಾದ್ರೆ ಸ್ಕೂಟರ್ ಮೇಲಿದ್ದೋರು, ಇಬ್ರೂ ಸತ್ತೋದ್ರೆ?

ರಾಮಣ್ಣ : ಇಲ್ಲ. ಇವನ ಜೊತೆಯವನಿಗೆ ತುಂಬಾ ಏಟಾಗದೆ. ಬೆಂಗಳೂರಿನಲ್ಲಿರೂ ದೊಡ್ಡ ಆಸ್ಪತ್ರೆಗೆ ತಕೊಂಡೋಗವ್ರೆ.

ನಿಂಗಣ್ಣ : ಸತ್ತೋದ ಹುಡುಗನಿಗೆ ವಯಸ್ಸು ಎಷ್ಟಾಗಿತ್ತು?

ರಾಮಣ್ಣ : ಕೈಗೆ ಬಂದ ಮಗ ಕಣಯ್ಯ. ಈಗ್ತಾನೆ ಎಂ.ಎ. ಮುಗಿಸ್ಕೊಂಡು, ಮೈಸೂರಲ್ಲಿ ಅದ್ಯಾವುದೋ ಕೆಲಸಕ್ಕೆ ಬೇರೆ ಸೇರಿದ್ದ.
[ಗುಂಪಿನಲ್ಲಿ ಇಬ್ಬರು ಹಳ್ಳಿಗರು ಆ ಸಂಭಾಷಣೆಯಲ್ಲಿ ತಲೆ ಹಾಕುತ್ತಾರೆ.]

ಹಳ್ಳಿಗ-1 : ಬೋ ಒಳ್ಳೆ ಹುಡುಗ ಕಣ್ ಸ್ವಾಮಿ. ಇಷ್ಟು ವರ್ಷ ಆಗಿತ್ತಲ್ಲ, ಊರಲ್ಲಿ ಒಂದು ದಿವ್ಸ ತಲೆ ಎತ್ಕೊಂಡು ನಡ್ದೋನೆ ಅಲ್ಲ. ಯಾರ್ ಸಿಗಲಿ ಬಾಯ್ತುಂಬ “ಅಣ್ಣ-ಅಕ್ಕ” ಅಂತ ಮಾತಾಡ್ಸಿತಿದ್ದ.

ನಿಂಗಣ್ಣ : ಪಾಪ...ತಮ್ಮಯ್ಯಂಗೆ ಇಂಥಾ ಗ್ರಾಚಾರ ಬರ್ಬಾರ್ದಿತ್ತು. ಅದ್ಸರಿ, ಹೆಣ ಎಷ್ಟೊತ್ತಿಗೆ ಕೊಟ್ಟರಂತೆ?

ಹಳ್ಳಿಗ-1 : ಅಯ್ಯೋ.... ಈಗೆಲ್ಲಿ ಕೊಟ್ಟರು? ಅದೇನೋ ಕೂದುಗೀದು ಎಲ್ಲಾ ಪಜೀತಿ ಮಾಡೇ ಕೊಡೋದು.

ಹಳ್ಳಿಗ-2 : ಕೂಟರ್ ಮ್ಯಾಲೆ ಲಾರಿ ಹರ್ದದ್ದ, ಊರೆಲ್ಲಾ ಕಂಡದಲ್ಲ, ಇನ್ನೇನ್ ಮತ್ತೆ ಕೂದು ನೋಡರು?

ನಿಂಗಣ್ಣ : ಹಿಂಗೆ ಆಕ್ಸಿಡೆಂಟಲ್ಲಿ ಸತ್ತಾಗ, ಕಾನೂನು ಪ್ರಕಾರ ಅದೆಲ್ಲಾನು ಮಾಡ್ಲೇಬೇಕು.

ರಾಮಣ್ಣ : ‘ಶವ ಪರೀಕ್ಷೆ’ ಅಂತ ಮಾಡಿ, ಸರ್ಕಾರಿ ಡಾಕ್ಟರು ರಿಪೋರ್ಟ್ ಕೊಡ್ತರೆ. ಮುಂದಕ್ಕೆಲ್ಲಾ, ಇನ್ಸೂರೆನ್ಸ್ ಅಂತ ಕೇಳ್ಬೇಕಾದ್ರೆ, ಆ ಲಾರಿಯವನ್ತಾವು ಏನಾದ್ರು ದುಡ್ಡು ಕಾಸ ಕೋರ್ಟು ಮೂಲಕ ಈಸ್ಕೊಬೇಕಾದ್ರೆ, ಹಿಂಗೆ ಹೆಣ ಕುಯ್ಯಲೆಬೇಕು ಕಣ್ರಯ್ಯ.

ಹಳ್ಳಿಗ-1 : ಹಂಗಾದ್ರೆ ಡಾಕ್ಟ್ರ ಜೊತೇಲಿ ನಿಮ್ಮಂಥವರು ಯಾರಾದ್ರು ಮಾತಾಡಿ, ಬೇಗ ಬೇಗ ಹೆಣ ಈಸ್ಕೊಳ್ರಪ್ಪ. ನೆನ್ನೆ ಸಾಯಂಕಾಲ ಆಸ್ಪತ್ರೆಗೆ ತಂದಾಕ್ದ ಹೆಣವ, ಇವತ್ತು ಹೊತಾರೆ ಹನ್ನೊಂದು ಗಂಟೆಯಾದ್ರು ಕೊಡಲಿಲ್ವಲ್ಲ. ಇದ್ಯಾಕೆ?

ನಿಂಗಣ್ಣ : ಸಂಜೆ ಆರು ಗಂಟೆ ಮೇಲೆ, ಯಾವಾಗ್ಲು ಶವ ಪರೀಕ್ಷೆ ಮಾಡೋದಿಲ್ಲ.

ಹಳ್ಳಿಗ-2 : ಇವತ್ತು ಬೆಳಗ್ಗೆಯಿಂದ ಏನಾಗಿದ್ದದು ಈ ಡಾಕ್ಟರ್ಗೆ?

ನಿಂಗಣ್ಣ : ಹುಡುಗನ ಕಡೆಯವರು ಯಾರಾದ್ರು ನೋಡಿದ್ದೀರಾ ಡಾಕ್ಟರನ?

ರಾಮಣ್ಣ : ಹುಡುಗನ ಚಿಕ್ಕಪ್ಪ ಇವತ್ತು ಹೊತ್ತುಗು ಮುಂಚೇನೆ ಡಾಕ್ಟರ ಮನೇತಕೆ ಹೋಗಿದ್ದ. ಈಗ ಇಲ್ಲೂ ಆಸ್ಪತ್ರೆ ಒಳ್ಗೋಗವ್ನೆ, ತಿರ್ಗ ಅವರ್ನೆ ನೋಡ್ಕೊಂಡು ಬರೂಕೆ.

[ಆಸ್ಪತ್ರೆ ಕಡೆಗೆ ನೋಡುತ್ತಾ]
ಅದೋ.... ಅಲ್ಲೆ ಬತ್ತಾವ್ನಲ್ಲ.
[ಹುಡುಗನ ಚಿಕ್ಕಪ್ಪ ಬೋರಣ್ಣ ರಂಗದ ಎಡಬದಿಯಿಂದ ಅಲ್ಲಿಗೆ ಬರುತ್ತಾರೆ]

ನಿಂಗಣ್ಣ : ಏನಂದ್ರು ಡಾಕ್ಟರು?

ಹಳ್ಳಿಗ-1 : ಹೆಣವ ಎಷ್ಟೊತ್ತಿಗೆ ಕೊಟ್ಟರಂತೆ?

ಹಳ್ಳಿಗ-2 : ಇದ್ಯಾಕಿಂಗೆ ತಡ ಮಾಡರಂತೆ?

ಬೋರಣ್ಣ : ಅದೇನೋ ಅಪ್ಪ, ಈ ಡಾಕ್ಟರು ಹೊತಾರೆಯಿಂದ್ಲು ಸರಿಯಾಗಿ ಬಾಯ್ನೆ ಬುಡಲ್ಲ. "ಇಷ್ಟು ಗಂಟೇಗೆ ಕೊಡ್ತೀನಿ" ಅಂತ್ಲು ಹೇಳೂದಿಲ್ಲ. ಕೇಳ್ದಾಗಲೆಲ್ಲಾ "ಮಾಡೋಣ ತಡೀರಿ.... ಮಾಡೋಣ ತಡೀರಿ. ಹೆಣ ಕುಯ್ಯೊಕೆ ಬ್ಯಾರೆ ಒಬ್ಬ ಕೆಲಸ್ಗಾರ ಅವ್ನೆ. ಅವನಿನ್ನೂ ಬಂದಿಲ್ಲ. ಅವನು ಬಂದ್ಮೇಲೆ ಮಾಡೋಣ ತಡೀರಿ" ಅಂತರೆ.

ಹಳ್ಳಿಗ-2 : ಅವನು ಎಷ್ಟೊತ್ತಿಗೆ ಬತ್ತನಂತೆ? ಆಗ್ಗೆ ಹನ್ನೊಂದು ಗಂಟೆ ಆಯ್ತಲ್ಲ! ಆಸ್ಪತ್ರೆಗೆ ಹೊತಾರೆ ಎಂಟು ಗಂಟೇಗೆ ಬರೋಕಿಲ್ವೆ ಅವನು?

ಹಳ್ಳಿಗ-1 : [ರಂಗದ ಬಲಬದಿಯ ಕಡೆಗೆ ನೋಡುತ್ತಾ]

ಅಲ್ನೋಡಿ, ಅದ್ಯಾವನೊ ಒಬ್ಬ ಇತ್ತಗೆ ಬತ್ತಾವ್ನೆ. ಬಿಳಿ ಬಟ್ಟೆ ಹಾಕೊಂಡವ್ನೆ, ಅವ್ನೆ ಇರಬೇಕು. ಕೇಳೂಕಾದ್ರು ಕೇಳಿ.

[ಬಿಳಿ ಬಣ್ಣದ ಸಮವಸ್ತ್ರ ತೊಟ್ಟಿರುವ ಆಸ್ಪತ್ರೆ ನೌಕರನೊಬ್ಬ ರಂಗದ ಬಲಬದಿಯಿಂದ ಬಂದು, ಅವರ ಮುಂದೆ ಹಾದು ಹೋಗುತ್ತಿರುತ್ತಾನೆ.]

ಹಳ್ಳಿಗ-2 : ಅಣ್ಣೋ.... ಸ್ವಲ್ಪ ನಿಂತ್ಕೊಳಣ್ಣ. ನೀನೆ ಏನಪ್ಪ ಹೆಣ ಕುಯ್ಯೋನು?

ವಾರ್ಡ್‌ಬಾಯ್: ನಾನು ಹೆಣ ಕುಯ್ಯೂನಲ್ಲ ಕಣಯ್ಯ, ವಾರ್ಡ್‌ಬಾಯ್.

ಹಳ್ಳಿಗ-1 : ಆ ವಯ್ಯ ಎಷ್ಟೊತ್ತಿಗೆ ಬತ್ತನೆ?

ವಾರ್ಡ್‌ಬಾಯ್: ಬೆಳಗ್ಗೇನೆ ಬಂದವ್ರಲ್ಲ, ಆಸ್ಪತ್ರೆ ಒಳಗೇ ಅವ್ರೆ.

ಬೋರಣ್ಣ : ಮತ್ತೆ, ಅವರಿನ್ನೂ ಬಂದಿಲ್ಲ ಅಂತ ಡಾಕ್ಟರು ಹೇಳುದ್ರು!

ವಾರ್ಡ್‌ಬಾಯ್: [ತನ್ನ ಕೈಯಲ್ಲಿದ್ದ ತಿಂಡಿ ಪೊಟ್ಟಣವನ್ನು ಎತ್ತಿ ತೋರಿಸುತ್ತಾ]

ಈಗ ನಾನು ತಕೊಂಡು ಹೊಯ್ತಾಯಿರು ಈ ತಿಂಡಿ, ನೀವು ಕೇಳ್ತಾ ಇರೋರ್ಗೆ ಕಣ್ರಿ.

ನಿಂಗಣ್ಣ : ಹಂಗಾದ್ರೆ ಡಾಕ್ಟರು ಸುಳ್ಳು ಹೇಳುದ್ರೆ?

ವಾರ್ಡ್‌ಬಾಯ್: ನಂಗೇನ್ರಿ ಗೊತ್ತು?.... ನಾನು ಬರ್ಲೆ.... ಟೈಮಾಯ್ತದೆ.

[ರಂಗದ ಎಡಬದಿಯ ಕಡೆಗೆ ಹೆಜ್ಜೆ ಹಾಕತೊಡಗುತ್ತಾನೆ]

ಹಳ್ಳಿಗ-1 : ಈಗೇನ್ ಮಾಡ್ಮ?

ಹಳ್ಳಿಗ-2 : ಈ ವಯ್ಯನ್ನೆ ಕೇಳ್ಬುಡಿ, ಅದೇನ್ ಒಳಗುಟ್ಟು ಅಂತ?

ಬೋರಣ್ಣ : [ಹೋಗುತ್ತಿದ್ದ ವಾರ್ಡ್‌ಬಾಯನ್ನು ಮತ್ತೆ ಕೂಗುತ್ತಾ]

ಅಣ್ಣೋ.... ಬಾಣ್ಣ ಇಲ್ಲಿ.

ವಾರ್ಡ್‌ಬಾಯ್: [ಅಲ್ಲಿಂದಲೇ]

ಟೈಮಾಯ್ತದೆ ನಂಗೆ. ಅದೇನು ಹೇಳ್ರಿ?

ಹಳ್ಳಿಗ-1 : ಒಂದ್ ಗಳ್ಗೆ ಬಂದು ಹೋಗಪ್ಪ.

[ಅವರ ಹತ್ತಿರಕ್ಕೆ ವಾರ್ಡ್‌ಬಾಯ್ ಮತ್ತೆ ಬರುತ್ತಾನೆ]

ಬೋರಣ್ಣ : ಆಸ್ಪತ್ರೇಲಿ ನೆನ್ನೆ ಹೆಣ ತಂದಾಕದಲ್ಲ, ಅದು ನಮ್ ಹುಡುಗಂದೆ. ಅದ ಪರೀಕ್ಷೆ ಮಾಡ್ಕೊಡೂಕೆ ಡಾಕ್ಟರು ಹಿಂದುಮುಂದು ಎಳೀತಾವ್ರಲ್ಲ ಯಾಕೆ?

ವಾರ್ಡ್‌ಬಾಯ್: ಯಾಕೆ ಅಂದ್ರೆ? ಏನು ಅಂತ ಹೇಳನೆ? ಅದಕ್ಕೆಲ್ಲಾ ಕೈ ಬೆಚ್ಚುಗೆ ಮಾಡ್ಬೇಕು.

ಹಳ್ಳಿಗ-2 : ಕೈ ಬೆಚ್ಚುಗು ಮಾಡೋದು ಅಂದ್ರೆ?

ವಾರ್ಡ್‌ಬಾಯ್: ಆಹಾ! ಏನು ಗೊತ್ತಿಲ್ದೆ ಇರೋನಂಗೆ ಕೇಳ್ತಿಯಲ್ಲಯ್ಯ. ನಿಮ್ಮ ಕೆಲ್ಸ ಆಗ್ಬೇಕಾದ್ರೆ ದುಡ್ಡು ಬಿಚ್ಬೇಕು.

ಹಳ್ಳಿಗ-1 : ಏನು!... ಹೆಣ ಕುಯ್ಯೊಕೆ ದುಡ್ಡ!

ವಾರ್ಡ್‌ಬಾಯ್: ಹೂ ಕಣಯ್ಯ. ಬರಿ ಹೆಣ ಕುಯ್ಯೊಕಲ್ಲ; ಹೆಣ ಕೂದು ಪರೀಕ್ಷೆ ಮಾಡಿ, ಡಾಕ್ಟರು ಕೊಡೂ ರಿಪೋರ್ಟ್ ಭೋ ಮುಖ್ಯ. ಅದ ಇಟ್ಕೊಂಡು, ಲಾರಿಯವನ ಮೇಲೆ ನೀವು ಕೇಸ್ ಹಾಕುದ್ರೆ, ಸಾವಿರಾರು ರೂಪಾಯಿ ಪರಿಹಾರ ಬತ್ತದೆ.

ಬೋರಣ್ಣ : ನಮ್ ಹುಡುಗ್ನೆ ಹೋದ್ಮೇಲೆ, ಯಾವ ದುಡ್ ಕಟ್ಕೊಂಡು ಏನಪ್ಪ?

ವಾರ್ಡ್‌ಬಾಯ್: ಹಂಗನ್ನಕಾದದೆ ಈಗ? ಆ ಕಾಲ ಹೊಂಟೋಯ್ತು. ಈಗ ಒಂದೊಂದು ಆಕ್ಸಿಡೆಂಟ್ ಕೇಸ್ನಲ್ಲೆ ಲಕ್ಷಕ್ಕಿಂತ ಹೆಚ್ಗೆ ಬತ್ತದೆ. ಹೋದೋರ್ ಹೋದ್ರು, ಇದ್ದೋರ್ಗಾದ್ರು ಒಳ್ಳೇದಾಗ್ಲಿ ಅಂತ, ಸರ್ಕಾರದೋರು ಇದ್ನೆಲ್ಲಾನು ಮಾಡವ್ರೆ. ಡಾಕ್ಟರು ಜೊತೇಲಿ ನೀವು ಅದೇನ್ ಮಾತಾಡ್ಕೊಂಡು ಬೇಗ ಬೇಗ ಹೆಣ ತಕೊಂಡೋಗೋದು ನೋಡಿ. ಸುಮ್ಮನ್ಯಾಕೆ ಅತ್ತಗೂ ಇತ್ತಗೂ ಸುತ್ತಾಡೀರಿ.

[ಎಂದು ಹೇಳುತ್ತಾ, ರಂಗದ ಎಡಬದಿಯಿಂದ ನೇಪಥ್ಯಕ್ಕೆ ಹೋಗುತ್ತಾನೆ.]

ಹಳ್ಳಿಗ-1 : ಇವನು ಹೇಳೂದು ಅಪ್ಪಂಗುಟ್ಟುದು ಮಾತೇ ಬುಡು. ಸುಮ್ನೆ ಹಿಂಗೆ ನಿಂತಿರೂದು ಬುಟ್ಬುಟ್ಟು, ಅದೇನು ಅಂತ ಹೋಗಿ, ಯಾರಾದ್ರು ಆ ಡಾಕ್ಟರ ಹತ್ರ ಮಾತಾಡೋಗ್ರಯ್ಯ.

ನಿಂಗಣ್ಣ : [ಹುಡುಗನ ಚಿಕ್ಕಪ್ಪ ಬೋರಣ್ಣನ ಕಡೆಗೆ ನೋಡುತ್ತಾ]
ನೀವೇ ಇನ್ನೊಂದು ಸತಿ ಡಾಕ್ಟರ ಹತ್ರ ಹೋಗಿ, ನೇರವಾಗಿ ಕೇಳೇ ಬುಡಿ. ಅದೇನ್ ಹೇಳನು ನೋಡ್ಮ ?

ಬೋರಣ್ಣ : ಅಯ್ಯೋ, ಅವ್ನ ಮನೆ ಹಾಳಾಗೋಗ! ನೆನ್ನೆಯಿಂದ ನಾಲ್ಕೈದು ಸತಿ ಇನ್ನಿಲ್ದಂಗೆ ಬೇಡ್ಕೊಂಡಿವ್ನಿ. ಹಿಂಗಲ್ಲ ಹಂಗೆ ಅಂತ ಬಾಯ್ಬುಟ್ಟು ಕೇಳ್ಬುಟ್ಟಿದ್ರೆ, ನೆನ್ನೆಯೇ ಒಂದಷ್ಟು ಬಿಸಾಕ್ಬೋದಾಗಿತ್ತು.

ಹಳ್ಳಿಗ-2 : ಈಗ್ ತಾನೆ ಏನು? ಬೇಗ ಬೇಗ ಹೋಗಿ ಮಾತಾಡ್ಕೊಂಡು ಬರೋಗಿ. ಇನ್ನು ಹೆಣನ ಊರಿಗೆ ತಕೊಂಡ್ ಹೋದ್ ಮ್ಯಾಲೆ, ಅಲ್ಲಿ ಎಷ್ಟೊತ್ತಾದದೋ ಏನ್ ಕತೆಯೊ? ಇವತ್ತು ಸಂದೆ ಹೊತ್ಗಾದ್ರು ಒಪ್ಪ ಮಾಡೂಕಿಲ್ವೆ?

ಹಳ್ಳಿಗ-1 : [ಹುಡುಗನ ಚಿಕ್ಕಪ್ಪನನ್ನೇ ಒತ್ತಾಯಿಸುತ್ತ]
ನೀವೇ ಹೋಗ್ಬನ್ನಿ. ಹೆಂಗಿದ್ರು ಮೂರ್‍ನಾಕು ಸತಿ ಡಾಕ್ಟರನ್ನ ನೋಡಿದ್ದೀರಲ್ಲ!

[ಈತನ ಮಾತಿನಂತೆ ಬೋರಣ್ಣ ಅತ್ತ ಆಸ್ಪತ್ರೆಯ ಒಳಕ್ಕೆ ನಡೆಯುತ್ತಾರೆ. ಇತ್ತ ಅಲ್ಲಿದ್ದವರ ನಡುವೆ ಲೋಕಾಭಿರಾಮವಾಗಿ ಮಾತುಕತೆ ಮುಂದುವರೆಯುತ್ತದೆ]

ನಿಂಗಣ್ಣ : ಏನ್ರಯ್ಯ, ಎಲ್ಲಿಂದೆಲ್ಲಿಗೋದ್ರು ಇದೇ ಆಗೋಯ್ತಲ್ಲ! ಲಂಚ ಇಲ್ದೆ ಯಾವ ಕೆಲ್ಸಾನು ಆಗೋದಿಲ್ವಲ್ಲ! "ಆಸ್ಪತ್ರೇಲಿ ಹಣ ಕೊಡ್ದೆ ಇದ್ರೆ, ಕಾಯ್ಲೆ ಕಸಾಲೆಯ ಸರಿಯಾಗಿ ನೋಡೋದಿಲ್ಲ" ಅಂತ ಕೇಳಿದ್ದೆ. ಆದ್ರೆ ಹಿಂಗೆ ಹೆಣ ಕುಯ್ಯೂಕು ಹಣ ಕೀಳ್ತಾರೆ ಅಂತ ಗೊತ್ತಿರ್‍ಲಿಲ್ಲ ಕಣಯ್ಯ!

ಹಳ್ಳಿಗ-2 : ಈ ಬೊಡ್ಡಿ ಹೈಕ್ಳಗೆ ರವಷ್ಟಾದ್ರು ಕರುಣೆ ಅನ್ನೋದೆ ಇಲ್ಲವೇನಯ್ಯ? ಹೆಣ ತಿನ್ನು ರಣಹದ್ದಿಗಿಂತ ಕಡೆಯಾಗೊಯ್ತಲ್ಲ, ಹಾಳಾದ್ ಈ ನರಮನ್ಸನ ಜಲ್ಮ!

ರಾಮಣ್ಣ : ಏನ್ ಮಾಡಿಯಪ್ಪ, ಹಿಂಗೆ ಲಾರಿಗೀರಿ ಡಿಕ್ಕಿ ಹೊಡ್ದು, ನಮ್ಮೋರು ತಮ್ಮೋರು ಅಂತ ಜನ ಕಳ್ಕೊಂಡು, ಆಳ್ತಾಯಿರೋರ್ ಸಂಕಟ, ಅವರ್‍ಗೆ ಹೆಂಗಯ್ಯ ಮುಟ್ಟದು? ಅವರ್‍ಗೆ ಇದೇ ಒಂದು ಚಾನ್ಸು ಹಣ ಕೀಳೋಕೆ.

ಹಳ್ಳಿಗ-1 : ಹಣ ಸಂಪಾದ್ನೆ ಮಾಡೂಕು, ಒಂದು ಮಾರ್ಗ ಇಲ್ವೇನಯ್ಯ? ಓದಿ ಕೆಲ್ಸಕ್ಕೆ ಸೇರ್ದ್ದೋರೆಲ್ಲಾ ಈ ಆಟಕ್ಕೆ ನಿಂತ್ಕೊಂಡ್ರಲ್ಲ, "ದೇಶ ಉದ್ಧಾರ ಆಗು" ಅಂದ್ರೆ ಎಲ್ಲಾದದು?

ನಿಂಗಣ್ಣ : ಎಲ್ರೂ ಹಿಂಗೆ ಇದ್ದರೇ? ಅಲ್ಲೂ ಒಳ್ಳೆಯವರು ಅವ್ರೆ, ಕೆಟ್ಟವರು ಅವ್ರೆ. ಏನ್ ಮಾಡಿಯೆ, ಪರಪಂಚ ಅಂದ್ಮೇಲೆ ಇವೆಲ್ಲಾ ಇದ್ದುದ್ದೆ.
[ಆಸ್ಪತ್ರೆಯ ಒಳಗಿನಿಂದ ಅಷ್ಟರಲ್ಲಿ ಬೋರಣ್ಣ ಹಿಂತಿರುಗಿ ಬರುತ್ತಾರೆ]

ಹಳ್ಳಿಗ-1 : ಏನಂದ್ರು ಡಾಕ್ಟರು?

ಹಳ್ಳಿಗ-2 : ಎಷ್ಟು ಕೇಳುದ್ರು?

ಬೋರಣ್ಣ : ಎರಡು ಸಾವಿರ ಕೊಡ್ಬೇಕಂತೆ!

ನಿಂಗಣ್ಣ : ಎಷ್ಟ?

ಬೋರಣ್ಣ : ಏನ್ ಅವರಪ್ಪ ಕೊಟ್ ಮಡಗಿದ್ನೆ. ಕೇಳೂಕು ಒಂದ್ ನಿಯ್ಯತ್ ಬ್ಯಾಡ್ವೇನಯ್ಯ?

ಬೋರಣ್ಣ : ನಾನೆಲ್ಲೊ ಇನ್ನೂರೋ.... ಮುನ್ನೂರೋ.... ಕೇಳ್ತನೆ. ಕೊಟ್ ಬುಡವ ಅನ್ಕೊಂಡಿದ್ದೆ. ಇಷ್ಟೊಂದು ಕೇಳ್ತನೆ ಅಂತ ಕನಸಲ್ಲು ತಿಳಿದಿರಲಿಲ್ಲ!

ಹಳ್ಳಿಗ-1 : ಅದ್ಯಾಕಂತೆ ಅಷ್ಟೊಂದ್ ದುಡ್ಡು?

ಬೋರಣ್ಣ : ಹೆಣ ಕೂದ್ ನೋಡ್ಬುಟ್ಟು, ಈ ವಯ್ಯ ಬರೀತಾನಂತಲ್ಲ ಬರವಣಿಗೆ, ಅದರ ಮ್ಯಾಲೆ ಅಂತ್ಲೆ ನಮ್ಮ ಹುಡುಗನ ಕಡೆಯವರ್ಗೆ ದುಡ್ ಬರೋದು.

ಹಳ್ಳಿಗ-2 : ಮುಂದಕ್ಕೆ ಬರೊ ದುಡ್ಗೆ, ಈಗ್ಲೆ ಎಟ್‌ಬುಡ್ಬೇಕಂತೊ ಇವನ್ಗೆ!

ಬೋರಣ್ಣ : "ಸಾವಿರಾರು ರೂಪಾಯಿ ಎಣಿಸ್ಕೋದಿಲ್ವೆ ಆಗ, ಈಗ ಎರಡು ಸಾವಿರ ರೂಪಾಯಿ ಏನು ಹೆಚ್ಚೆ?" ಅಂತನೆ ಆ ಡಾಕ್ಟರು!

ನಿಂಗಣ್ಣ : ಈಗೇನ್ ಮಾಡೀರಿ? ದುಡ್ ತಂದಿದ್ದೀರಾ?

ಬೋರಣ್ಣ : ಅಯ್ಯೋ.... ನಾನ್ಯಾಕಪ್ಪ ಅಷ್ಟೊಂದು ದುಡ್ ತರನೇ? ಹಿಂಗೆ ಅಂತ ನೆನ್ನೆಯೇ ಗೊತ್ತಿದ್ರೆ, ನಮ್ಮ ಎಂ.ಎಲ್.ಎ., ಕೈಯಲ್ಲೋ ಜಿಲ್ಲಾ ಪಂಚಾಯ್ತಿ ಅಧ್ಯಕ್ಷರ ಕೈಯಲ್ಲೋ, ಈ ಡಾಕ್ಟರ್ಗೆ ಒಂದು ಫೋನಾರ ಮಾಡ್ಸುಬೋದಾಗಿತ್ತು.

ಹಳ್ಳಿಗ-2 : ಯಾಕೆ ಅವರೇನಂತ ಹೇಳರು? ಇವರ್ಗು ಅವರ್ಗು ಏನ್ ಸಂಬಂಧ?

ಬೋರಣ್ಣ : ಈ ಡಾಕ್ಟರಂಥ ದೊಡ್ ದೊಡ್ಡ ಆಫೀಸರ್ಗಳೆಲ್ಲ ಅವರ್ಗೆ ಗೊತ್ತಿರ್ತದೆ ಕಣಯ್ಯ. ಹಿಂಗೆ ನಮ್ಮ ಕಡೆಯವರು ಅಂತ ಹೇಳುದ್ರೆ, ಒಸಿ ಕಮ್ಮಿನಾರೆ ಮಾಡ್ಕೋನೊ ಏನೊ?

[ಹೀಗೆ ಮಾತನಾಡುತ್ತಿರುವಾಗ, ಯುವಕ ಸಂಘದ ಸದಸ್ಯರಾದ ಶಿವಲಿಂಗ ಮತ್ತು ಚನ್ನೇಗೌಡ ಎಂಬ ಯುವಕರು ಅಲ್ಲಿಗೆ ಬರುತ್ತಾರೆ. ಇವರಿಬ್ಬರು ಅಪಘಾತದಲ್ಲಿ ಸತ್ತಿರುವ ಯುವಕನ ಓರಿಗೆಯವರು.]

ಶಿವಲಿಂಗ : ಸೂಳೇಮಗ, ಆ ಲಾರಿ ಡ್ರೈವರ್ ತಲೆ ತಪ್ಪಿಸ್ಕೊಂಡು ಹೊಂಟೋಗವ್ನೆ!

ರಾಮಣ್ಣ : ನೀವೆಲ್ಲಿಂದ ಬತ್ತಿದ್ದೀರಿ ಈಗ?

ಚನ್ನೇಗೌಡ : ಪೋಲಿಸ್ ಸ್ಟೇಷನ್ ತಕೆ ಹೋಗಿದ್ದೊ. ಆಕ್ಸಿಡೆಂಟ್ ಆದ ತಕ್ಷಣವೇ ಲಾರೀನ ಅಲ್ಲೇ ಬುಟ್ಬುಟ್ಟು, ಎತ್ತಗೋ ಹೊಂಟೋದ್ನಂತೆ. ಆ ಬೊಡ್ಡಿಹೈದ ಡ್ರೈವರ್ ಸಿಕ್ಕಿದ್ರೆ, ಹಿಡ್ಕೊಂಡು ಗತಿ ಕಾಣಿಸ್ಬುಡ್ತಿದ್ದೊ.

ಹಳ್ಳಿಗ-1 : ಅವನ್ಗೆ ಗತಿ ಕಾಣ್ಸುದ್ರೆ, ಸತ್ತೋಗಿರೂನು ಏನ್ ಎದ್ದು ಬಂದನೇ? ಅದಿರ್ಲಿ ಈಗ ಬಂದಿರೋ ಗ್ರಾಚಾರಕ್ಕೆ ಏನ್ ಹೇಳಿರಪ್ಪ?

ಶಿವಲಿಂಗ : ಇನ್ನೇನಾಗಿದೆ?

ರಾಮಣ್ಣ : ಹೆಣ ಕುಯ್ಯೂಕೆ ಎರಡು ಸಾವಿರ ಲಂಚ ಕೇಳ್ತಾವ್ರೆ!

ಶಿವಲಿಂಗ : ಯಾವ ಲುಚ್ಛಾ ನನ್ಮಗ ಕೇಳ್ತಾಯಿರೋನು?

ನಿಂಗಣ್ಣ : ಈ ಸರ್ಕಾರಿ ಡಾಕ್ಟರು.

ಚನ್ನೇಗೌಡ : ಯಾಕಂತೆ ಲಂಚ?

ರಾಮಣ್ಣ : ಹೆಣ ಕೂದು ನೋಡಿ, ರಿಪೋರ್ಟ್ ಕೊಡ್ತನಲ್ಲ ಅದಕ್ಕೆ.

ಶಿವಲಿಂಗ : ಅದಕ್ಕೆ ದುಡ್ಯಾಕೆ ಕೊಡ್ಬೇಕಂತೆ! ಶವ ಪರೀಕ್ಷೆ ಮಾಡಿ, ಅದೇನಿದ್ದದೋ, ಆ ರಿಪೋರ್ಟ್ ಕೊಡೂದು ಅವನ ಕೆಲ್ಸ.

ಚನ್ನೇಗೌಡ : ಅವನ್ಗೆ ಸರ್ಕಾರ ಸಂಬಳ ಕೊಡ್ತಾಯಿಲ್ವೆ? ಅವರು, ಅವರ ಹೆಡ್ತಿ ಮಕ್ಕಳೆಲ್ಲಾ ಐಭೋಗದಲ್ಲಿ ಮೆರಿಯೋಕೆ ಗಿಂಬಳನೂ ಬೇಕು.

ರಾಮಣ್ಣ : ಸರ್ಕಾರಿ ಕೆಲ್ಸ ಅನ್ನೋದು ಇಂಥಾವರ್ಗೆ ಲಂಚ ಹೊಡಿಯೂಕೆ ಲೈಸನ್ಸ್ ಇದ್ದಂಗೆ ಕಣ್ರಯ್ಯ.

ಶಿವಲಿಂಗ : ತಾವು ಮೆರೆಯೋಕೆ ಈ ಸೂಳೇಮಕ್ಳು ನಮ್ಮ ರೈತರ ರಕ್ತ ಹೀರಬೇಕೆ?

ಹಳ್ಳಿಗ-1 : ರೈತರದೆ ಏನ? ಅವರ ಹತ್ರಕ್ಕೆ ಯಾರ್ಯಾರು ಬತ್ತರೋ, ಅವರ್ತಾವಲ್ಲ ಕೀಳ್ತರೆ.

ಚನ್ನೇಗೌಡ : ಜನವೆಲ್ಲಾ ಸುಮ್ನಿರುವತ್ಗೆ, ಅವರು ಹಿಂಗೆಲ್ಲಾ ಸುಲ್ಗೆ ಮಾಡ್ತಾವ್ರೆ. ಎಲ್ಲರೂ ಒಟ್ಟಾಗಿ ಹಿಡ್ಕೊಂಡು ಇಕ್ಕುದ್ರೆ, ಈ ಲಂಚಕೋರ ನನ್ಮಕ್ಳ ಹುಟ್ಟಡಗಿಸೋದು ಎಷ್ಟೊತ್ತಿನ ಕೆಲ್ಸ?

ಹಳ್ಳಿಗ-2 : ಗರ್ಕೆ ಬೇರ್ನೆಲ್ಲಾ ಕಿತ್ತಾಕೂಕಾದದೆ ಮಗ? ಒಂತಾವು ಕಿತ್ತಾಕುದ್ರೆ, ಇನ್ನೊಂದು ತಾವು ಚಿಗುರ್ಕೊತದೆ!

ಶಿವಲಿಂಗ : ಹಂಗಂತಾ ಲಂಚ ಕೊಟ್ಕೊಂಡೆ ಹೊಯ್ತಿರೂದು ಅಂತೀಯೇನಯ್ಯ?

ಹಳ್ಳಿಗ-2 : ಕೆಲ್ಸ ಆಗ್ಬೇಕಾದ್ರೆ, ಇನ್ನೇನು ಮಾಡೀಯೆ?

ಶಿವಲಿಂಗ : ಥೂ ಏನಯ್ಯ, ಎಂಥಾ ಮುಟ್ಟಾಳ್ ಮಾತಾಡ್ತೀಯೆ? ಇಲ್ಲಿರೂ ನಾವಿಷ್ಟು ಜನವೇ ಮನಸ್ಸು ಮಾಡುದ್ರೆ, ಈಗ ಈ ಡಾಕ್ಟರ್ಗೆ ಸರಿಯಾಗಿ ಬುದ್ಧಿ ಕಲ್ಸೋಕೆ ಆಗೋದಿಲ್ವೆ?

ಚನ್ನೇಗೌಡ : [ಹುಡುಗನ ಚಿಕ್ಕಪ್ಪ ರಾಮಣ್ಣನವರ ಕಡೆ ತಿರುಗಿ]
ನೋಡಿ, ನೀವು ಡಾಕ್ಟರ್ಗೆ ಒಂದು ಪೈಸೆನೂ ಕೊಡ್ಬೇಡಿ. ಆ ಲೌಡಿ ಮಗನಿಗೆ ಈಗ ನಾನು ಸರಿಯಾದ ಬುದ್ಧಿ ಕಲಿಸ್ತೀನಿ.

ಬೋರಣ್ಣ : ಏನು ಗಲಾಟೆ ಮಾಡ್ಕೋದು ಬ್ಯಾಡ ಕಣಪ್ಪ. ಮೊದ್ಲೆ ಹೆಣ ಬಿದ್ದದೆ. ನಮ್ಮ ಗ್ರಾಚಾರಕ್ಕೆ ಇನ್ನೇನಾದ್ರು ಆದದು?

ಚನ್ನೇಗೌಡ : ಈಗ ಆಗಿರೊದಿಕ್ಕಿಂತ ಇನ್ನೇನಾದದು ಸುಮ್ನಿರಿ.

[ಯುವಕ ಸಂಘದ ಸದಸ್ಯ ಶಿವಲಿಂಗನ ಜೊತೆಯಲ್ಲಿ ಕೆಲವು ಕ್ಷಣಕಾಲ ಪಿಸುಮಾತಿನಲ್ಲಿ ಏನನ್ನೋ ಹೇಳುತ್ತಾನೆ. ಶಿವಲಿಂಗನು ಅದಕ್ಕೆ ಒಪ್ಪಿಗೆ ಕೊಟ್ಟಂತೆ ದೃಷ್ಟಿ ಬೀರಿ, ತಲೆಯಾಡಿಸುತ್ತಾನೆ]

ಚನ್ನೇಗೌಡ : [ರಾಮಣ್ಣನವರನ್ನು ಕುರಿತು]
ಎಷ್ಟು ರೂಪಾಯಿ ಕೇಳ್ದ ಆ ಡಾಕ್ಟರು?

ರಾಮಣ್ಣ : ಎಷ್ಟಾರ ಕೇಳಿರ್ಲಿ, ಈಗ ನೀನೇನು ಮಾಡ್ಬೇಕು ಅಂತ ಇದ್ದೀಯೆ?

ಚನ್ನೇಗೌಡ : ಆ ಲೋಪರ್ ನನ್ಮಗನ್ಗೆ ಈಗ ಸರಿಯಾಗಿ ಬುದ್ಧಿ ಕಲಿಸದೆ ಇದ್ರೆ, ನಾನು ಅಪ್ಪಂಗುಟ್ಟುದ್ ಮಗ್ನೆ ಅಲ್ಲ!

ನಿಂಗಣ್ಣ : ಅದೇನ್ ಮಾಡ್ತೀಯೆ, ಅದ ಮೊದ್ಲು ಇಲ್ಲಿರೂ ನಮಗೆಲ್ಲಾ ಒಪ್ಪಸಪ್ಪ. ನೀನ್ ಹೇಳೂದು ಸರಿ ಕಂಡು ಬಂದ್ರೆ, ನಾವೆಲ್ಲಾ ನಿಂಗೆ ಸಪೋರ್ಟ್ ಮಾಡ್ತೀವಿ.

(ಅಲ್ಲಿದ್ದವರನ್ನು ಕುರಿತು)
ಹಂಗೆ ಅಲ್ವೇನ್ರಯ್ಯ ?
[ಎಲ್ಲರೂ 'ಆಗಲಿ' ಎನ್ನುವಂತೆ ತಮ್ಮ ಒಪ್ಪಿಗೆ ಸೂಚಿಸುತ್ತಾರೆ]

ಚನ್ನೇಗೌಡ : (ಹುಡುಗನ ಚಿಕ್ಕಪ್ಪ ಬೋರಣ್ಣನವರನ್ನು ಕುರಿತು)
ಈಗ ಆ ಡಾಕ್ಟರು ಕೇಳಿರುವಷ್ಟು ಎರಡು ಸಾವಿರ ಕೊಡೋಣ. ನಿಮ್ಮತಾವಿರು ದುಡ್ಡು ಕೊಡಿ ಮತ್ತೆ.

ಬೋರಣ್ಣ : ಅಯ್ಯೋ, ನನ್ತಾವು ಎಲ್ಲಿದ್ದದಪ್ಪ, ಅಷ್ಟೊಂದು? ನೆನ್ನೆ ಹಿಂಗಾದ್ಮೇಲೆ, ಯಾತಕ್ಕಾದ್ರು ಬೇಕಾಯ್ತದೆ ಅಂತ, ನನ್ ಹೆಂಡ್ತಿ ಅವಲಕ್ಕಿ ಸರನೆ ಆ ಸೇಟು ಹತ್ರ ಅಡ ಇಟ್ಬುಟ್ಟು, ಒಂದು ಸಾವಿರ ತಂದಿದ್ದೆ. ಇನ್ನು ಊರಲ್ಲಿ ಹೆಣ ಒಪ್ಪ ಮಾಡೋಕೆ ಒಂದು ಮುನ್ನೂರು ಬೇಕಾಯ್ತದೆ.

[ಜೇಬಿನಿಂದ ದುಡ್ಡನ್ನು ತೆಗೆದು, ಅದರಲ್ಲಿ ಮುನ್ನೂರನ್ನು ಮತ್ತೆ ಜೇಬಿನಲ್ಲಿರಿಸಿಕೊಂಡು]
ತಕೊಪ್ಪ, ಏಳ್ನೂರು ರೂಪಾಯಿ, ಇಷ್ಟಕ್ಕೆ ಹೆಂಗಾರ ಮಾಡಿ ಒಪ್ಸಪ್ಪ.
[ದುಡ್ಡನ್ನು ಚನ್ನೇಗೌಡನಿಗೆ ನೀಡುತ್ತಾರೆ]

ಚನ್ನೇಗೌಡ : ಇಲ್ಲ.... ಇಲ್ಲ.... ಎರಡು ಸಾವಿರಕ್ಕೆ ಒಂದು ಪೈಸೇನೂ ಕಮ್ಮಿ ಕೊಡೂದು ಬ್ಯಾಡ.

ಹಳ್ಳಿಗ-1 : ಇದೇನಪ್ಪ, ಹಿಂಗೆ ಶುರು ಮಾಡ್ಕೊಂಡೆ! ಲಂಚ ಕೊಡೂಕೆ ಅಂತ ಹಿಂಗೆ ದುಡ್ಡು ಈಸ್ಕೋತಾಯಿದ್ದೀಯಲ್ಲ, ನಾಚ್ಕೆ ಆಗೋದಿಲ್ವೆ ನಿಂಗೆ?

ನಿಂಗಣ್ಣ : ಸರ್ಕಾರಿ ನೌಕರರಿಗೆ ಲಂಚ ರುಷುವತ್ ಕೊಡ್ಬೇಡಿ ಅಂತ ಕಛೇರಿಗಳ ಮುಂದೆ ರೈತ ಸಂಘದೋರು ಬೋರ್ಡು ಹಾಕವ್ರೆ. ಇಲ್ನೋಡುದ್ರೆ, "ಡಾಕ್ಟರ್ಗೆ ಸರಿಯಾಗಿ ಬುದ್ಧಿ ಕಲಿಸ್ತೀನಿ" ಅಂದ್ಬುಟ್ಟು, ಲಂಚ ಕೊಡೂಕೆ ರೈತನ ಮಗನಾಗಿ ನೀನೇ ಮುಂದಕ್ಕೆ ನಿಂತಿದ್ದೀಯಲ್ಲ? ಇದೇನಯ್ಯ ನಿನ್ನ ಕತೆ?

ಚನ್ನೇಗೌಡ : ಆ ಕತೆಯ ನೀವೇ ನೋಡೂರಂತೆ! ಮೊದಲು ಎರಡು ಸಾವಿರ ಜೊತೆ ಮಾಡ್ಬೇಕು. ಈಗ ಅದೆಷ್ಟು ಇದ್ದದು ನಿಮ್ಮ ಹತ್ರ, ಕೊಡಿ ಮತ್ತೆ ಬೇಗ ಬೇಗ.
(ಅಲ್ಲಿದ್ದವರೆಲ್ಲರನ್ನು ದುಡ್ಡಿಗಾಗಿ ಯಾಚಿಸತೊಡಗುತ್ತಾನೆ.)

ಹಳ್ಳಿಗ : ನನ್ತಾವು ಯಾವ ದುಡ್ಡಿದ್ದದು? ಎಲ್ಲೋ ಒಂದು ಇಪ್ಪತ್ತಿರ್ಬೇಕು. ಸಂದೆಗಂಟ ಖರ್ಚಿಗೆ, ಇತ್ಲಿಂದ ಬಸ್ಸಿಗೆ ಹೋಗೋಕೆ ದುಡ್ಡು ಬ್ಯಾಡ್ವೆ?

ಚನ್ನೇಗೌಡ : ಐದು ರೂಪಾಯಿ ಇಟ್ಕೊಂಡು, ಉಳಿದದ್ದು ಕೊಡಯ್ಯ. ಹೆಂಗಿದ್ರು ಹೆಣವ ಲಾರಿಲಲ್ಲವೇ ತಕೊಂಡು ಹೋಗೋದು? ಬಸ್ಸಿಗೆ ಒಂದ್ ಸತಿ ಯಾಕೆ ದಂಡ ಕೊಟ್ಟಿಯೆ?

ಹಳ್ಳಿಗ-1 : ಹಂಗಾದ್ರೆ ತಕೊಪ್ಪ, ನಂದು ಹದಿನೈದು.

ಹಳ್ಳಿಗ-2 : ತಕೊಪ್ಪ ನಂದು ಐವತ್ತ.
[ಅಲ್ಲಿದ್ದವರೆಲ್ಲರೂ ತಮ್ಮ ತಮ್ಮ ಕೈಲಾದಷ್ಟು ಹಣವನ್ನು ನೀಡುತ್ತಾರೆ. ಎಲ್ಲವನ್ನು ಎಣಿಸಿದಾಗ ಒಂದು ಸಾವಿರದ ನಾನೂರು ಆಗುತ್ತದೆ. ಇನ್ನುಳಿದ ಆರುನೂರನ್ನು

ಚನ್ನೇಗೌಡ ಮತ್ತು ಶಿವಲಿಂಗ ತಮ್ಮ ಕೈಯಿಂದ ಹಾಕುತ್ತಾರೆ. ಚನ್ನೇಗೌಡ ಈಗ ಮತ್ತೊಮ್ಮೆ ನೋಟುಗಳೆಲ್ಲವನ್ನು ಸರಿಯಾಗಿ ಎಣಿಸಿಕೊಂಡು, ತಾನು ನಿಂತಲ್ಲಿಂದಲೇ ಡಾಕ್ಟರನ್ನು ಕೂಗತೊಡಗುತ್ತಾನೆ.]

ಚನ್ನೇಗೌಡ : ರ್‍ರೀ.... ಡಾಕ್ಟರೇ.... ರ್‍ರೀ.... ಡಾಕ್ಟರೇ.... ಈಚ್ಗೆ ಬನ್ರಿ ಇಲ್ಲಿ.

ಹಳ್ಳಿಗ-1 : ನಿಂಗೇನು ಬುದ್ಧಿ ಗಿದ್ಧಿ ಇದ್ದದೋ ಹೆಂಗಪ್ಪ ಮಗ? ಇಲ್ಲಿಂದ್ಲೆ ಕರೀತಾಯಿದ್ದೀಯಲ್ಲ, ನಿನ್ತಕೆ ಬಂದ್‌ಬುಟ್ಟರೆ ಡಾಕ್ಟರು?

ಚನ್ನೇಗೌಡ : ಆ ಬಡ್ಡಿ ಹೈದನ್ತಕೆ ನಾನ್ಯಾಕೆ ಹೋಗ್ಬೇಕು? ದುಡ್ಡು ಬೇಕಾಗಿರೋದು ಅವನಿಗಲ್ಲವೇ ಅವನೇ ಬರೂಕಿಲ್ವೆ ನಮ್ಮತಕೆ?

ರಾಮಣ್ಣ : ಅಯ್ಯೋ.... ಈ ಒರಟಾಟದಲ್ಲೆ ಬಂದ್ಬುಟ್ರಲ್ಲ ನೀವು! ಬಾಯ್ಗೆ ಬಂದಂಗೆ ಏನೂ ಅನ್ಬೇಡ. ಸುಮ್ನೆ ಕೊಟ್ಬುಟ್ಟು ಬರೋಗಪ್ಪ.

ನಿಂಗಣ್ಣ : ನಂಗ್ಯಾಕೊ ಈ ಚನ್ನೇಗೌಡನ ಕಳ್ಸೂ ಬದ್ಲು, ನಮ್ಮ ಬೋರಣ್ಣನ್ನೆ ಡಾಕ್ಟರ್‍ತಕೆ ಕಳ್ಸೋದು ಮೇಲು ಅನ್ನಿಸ್ತದೆ.
[ಬೋರಣ್ಣನವರ ಕಡೆ ತಿರುಗಿ]
ನೀವೇ ದುಡ್ಡು ಈಸ್ಕೊಂಡು, ಡಾಕ್ಟರ್ಗೆ ಕೊಟ್ಬುಟ್ಟು ಬರೋಗಿ.

ಚನ್ನೇಗೌಡ : ಈ ದುಡ್ಡ ಅವನ್ಗೆ ಅಷ್ಟು ಸಲೀಸಾಗಿ ಕೊಟ್ಬುಡುಕಾದದೇ?

ಹಳ್ಳಿಗ-1 : ಇನ್ನೆಂಗೆ ಕೊಟ್ಟಿಯೆ?

ನಿಂಗಣ್ಣ : ನಿಂಗೆ ಮೊದ್ಲೆ ಹೇಳಿದ್ದೆ. "ಡಾಕ್ಟರ್ಗೆ ಅದೇನು ಮಾಡ್ಬೇಕು ಅಂತ ಇದ್ದೀಯೆ, ಅದ ನಮಗೆಲ್ಲಾ ಹೇಳು" ಅಂತ. ನೀನು ಅಡ್‌ಗ್ಯಾನ ಮಾಡ್ಬುಟ್ಟು. ಈಗ ದುಡ್ಡು ಬ್ಯಾರೆ ವಸೂಲು ಮಾಡ್ಬುಟ್ಟೆ!

ಚನ್ನೇಗೌಡ : ನಾನೇನು ದುಡ್ಡ ತಿಂದ್ಕೊಂಡ್ನೆ ಈಗ?

ನಿಂಗಣ್ಣ : "ನಿನ್ನ ತಿಂದ್ಕೊಂಡೆ" ಅಂದ್ನೆ ನಾನು? ತಿರ್‍ಗ ಕೇಳ್ತಾಯಿದ್ದೀನಿ, ಈ ದುಡ್ಡ ಡಾಕ್ಟರ್ಗೆ ಹೆಂಗೆ ಕೊಡ್ತೀಯೆ ಅನ್ನೋದ ಮೊದ್ಲು ಹೇಳು, ಅದು ಸರಿ ಬಂದ್ರೆ ನಾವೆಲ್ಲ ಒಪ್ಕೊತೀವಿ.

ಚನ್ನೇಗೌಡ : ಆಸ್ಪತ್ರೆ ಒಳಕ್ಕೆ ಹೋಗಿ, ಆ ಡಾಕ್ಟ್ರ ಹೆಕ್ಕತ್ತಿನ ಪಟ್ಟಿ ಹಿಡ್ಕೊಂಡು, ಇಲ್ಲಿಗೆ ಎಳ್ಕೊಂಡು ಬತ್ತೀನಿ.

[ತನ್ನ ಕೈಯಲ್ಲಿದ್ದ ನೋಟುಗಳನ್ನು ತೋರಿಸುತ್ತಾ]
ಇವ ಒಂದೊಂದ್ನೆ ನೆಲದ ಮೇಲಕ್ಕೆ ಹಾಕ್ತ, ಅವನ ಹೆಕ್ಕತ್ ಮೇಲೆ ಮಿದ್ದಿ ಮಿದ್ದಿ ದುಡ್ಡ ಎತ್ಕೊಳುವಂಗೆ ಮಾಡ್ತೀನಿ.

ನಿಂಗಣ್ಣ : ನೀನು ಹಂಗೆ ಮಾಡೋಕೆ ಹೋದ್ರೆ, ಏನಾಯ್ತದೆ ಗೊತ್ತೆ?

ಚನ್ನೇಗೌಡ : ಏನಾದದು?

ನಿಂಗಣ್ಣ : ಮುಂದಕ್ಕೆ ಆಗೋದ ಈಗ್ಲೆ ಹೇಳ್ತೀನಿ ನೋಡು.
[ಹೀಗೆ ಹೇಳುತ್ತಿದ್ದಂತೆಯೇ ರಂಗದ ಮೇಲೆ ಕತ್ತಲು ಕವಿಯುತ್ತದೆ. ಮುಂದಿನ ಘಟನೆಗೆ Flash Front Technique ಅಳವಡಿಸಿದೆ. ಅಂದರೆ ಮುಂದಾಗಲಿರುವ ಘಟನೆಗಳನ್ನು ಮೊದಲೇ ಊಹಿಸಿಕೊಳ್ಳುವುದು. ಕೆಲವು ಕ್ಷಣಗಳ ನಂತರ ರಂಗದ ಮೇಲೆ ಬೆಳಕು ವ್ಯಾಪಿಸಿದಾಗ ಚನ್ನೇಗೌಡ ಒಬ್ಬನೇ ಇರುತ್ತಾನೆ]

ಚನ್ನೇಗೌಡ : ಲೇ ಡಾಕ್ಟರೇ, ಹೆಣ ಕುಯ್ಯೋಕೆ ಹಣ ಬೇಕೇನ್ಲಾ ನಿಂಗೆ.... ಕೊಡ್ತೀನಿ ತಕೊ.... ನೀನ್ ಕೇಳ್ದಷ್ಟೆ ಕೊಡ್ತೀನಿ ತಕೊಳೋ.

[ಈ ರೀತಿ ಆಕ್ರೋಶಭರಿತನಾಗಿ ಕಿರುಚುತ್ತಾ, ಆಸ್ಪತ್ರೆಯ ಒಳಕ್ಕೆ ನುಗ್ಗುತ್ತಾನೆ. ಒಳಗಡೆಯಿಂದ ಗದ್ದಲ ಕೇಳಿಬರತೊಡಗುತ್ತದೆ. ಕೆಲವು ಕ್ಷಣಗಳ ನಂತರ, ಡಾಕ್ಟರ ಹೆಕ್ಕತ್ತಿನ ಪಟ್ಟಿಯನ್ನು ಚನ್ನೇಗೌಡ ಹಿಡಿದು. ದರದರನೆ ಅವರನ್ನು ಎಳೆದುಕೊಂಡು ರಂಗದ ಮಧ್ಯಕ್ಕೆ ಬರುತ್ತಾನೆ.]

ಚನ್ನೇಗೌಡ : ದುಡ್ಡು ಬೇಕೇನೊ ನಿಂಗೆ? ಯಾಕೆ, ತಿಂಗಳ ತಿಂಗಳ ಸಂಬಳ ಅಂತ ಸರ್ಕಾರ ಸಾವಿರಾರು ರೂಪಾಯಿ ಎಟ್ಟತಾರಲ್ಲ, ಅದು ಸಾಕಾಗುದಿಲ್ವೆ ನಿಂಗೇ? ಸಂಬಳದ ಜೊತೆಗೆ ಈ ಎಂಜ್ಲು ಬೇಕೇನ್ಲ?

[ಚನ್ನೇಗೌಡನ ಮುಖವನ್ನೆ ಡಾಕ್ಟರು ದುರುಗುಟ್ಟುಕೊಂಡು ನೋಡತೊಡಗುತ್ತಾನೆ.]

ಮೊಕ ಏನ್ ನೋಡ್ತಿಯ.... ಸೂಳೇಮಗ್ನೆ, ದುಡ್ಡು ತಾನೆ ನಿಂಗೆ ಬೇಕಾಗಿರೂದು. ತಕೊ ಕೊಡ್ತೀನಿ.

[ತನ್ನ ಕೈಯಲ್ಲಿದ್ದ ನೋಟುಗಳನ್ನು ಡಾಕ್ಟರ್ಗೆ ತೋರಿಸುತ್ತಾ]
ಈ ದುಡ್ಡು ರೈತರು ನಡ ಬಗ್ಗಿಸಿ, ಬೆವರು ಸುರ್ಸಿ, ರಕ್ತ ಬಸಿದು ಸಂಪಾದ್ನೆ ಮಾಡೀರೂದು. ಇದ ನೀನು ಹಂಗೆ ನಡಬಗ್ಗಿಸೆ ಎತ್ಕೋಬೇಕು.

[ಎಂದು ಹೇಳುತ್ತಾ, ನೂರರ ಒಂದು ನೋಟನ್ನು ನೆಲದ ಮೇಲಕ್ಕೆ ಎಸೆದು, ಡಾಕ್ಟರ ಬೆನ್ನಿನ ಮೇಲೆ ಬಲವಾಗಿ ಗುದ್ದುತ್ತಾನೆ. ಆ ನೋಟಿನ ಮೇಲೆ ಡಾಕ್ಟರು ಮುಗ್ಗರಿಸಿ ಬೀಳುತ್ತಾನೆ]

ಚನ್ನೇಗೌಡ : ಎತ್ಕೊ ಈಗ ನೋಟ.... ಎತ್ಕೊಳ್ಳ ನೋಟ.
[ನೋಟನ್ನು ಮುಟ್ಟದೆ ಡಾಕ್ಟರು ಸುಮ್ಮನಿರುತ್ತಾನೆ]
ನೋಟ ಎತ್ಕೋದೇದ್ರೆ ಎಲ್ಲಾ ಕಲ್ಸೋಗುವಂಗೆ ತುಳ್ದಾಕುಬುಡ್ತೀನಿ ಈಗ. ಎತ್ಕೋತಿಯೋ ಇಲ್ವೋ ?

[ಚನ್ನೇಗೌಡನ ಹುಚ್ಚು ಆವೇಶದ ಮುಂದೆ ಗಡಗಡನೆ ನಡುಗುತ್ತಿರುವ ಡಾಕ್ಟರು, ಆ ನೋಟನ್ನು ಎತ್ತಿಕೊಂಡು ಮೇಲೇಳುತ್ತಾನೆ. ಮತ್ತೊಂದು ನೋಟನ್ನು ನೆಲದ ಮೇಲೆ ಹಾಕಿ, ಮತ್ತೆ ಡಾಕ್ಟರ ಬೆನ್ನ ಮೇಲೆ ಚನ್ನೇಗೌಡ ಆರ್ಭಟಿಸುತ್ತ ಗುದ್ದುತ್ತಾನೆ. ಚನ್ನೇಗೌಡನ ಹಲ್ಲೆಗೆ ಗುರಿಯಾದ ಡಾಕ್ಟರು, ಅನ್ಯಮಾರ್ಗವಿಲ್ಲದೆ ಬೀಳುತ್ತಾ ಏಳುತ್ತಾ, ಚನ್ನೇಗೌಡನು ಒಂದೊಂದಾಗಿ ಎಸೆಯುತ್ತಿದ್ದ ನೋಟುಗಳನ್ನು ಎತ್ತಿಕೊಳ್ಳುತ್ತಿರುವಾಗ, ರಂಗದ ಬಲ ಬದಿಯಿಂದ ಓಡಿ ಬಂದ ಇಬ್ಬರು ಪೋಲಿಸರು ಡಾಕ್ಟರನ್ನು ಚನ್ನೇಗೌಡನ ಹಲ್ಲೆಯಿಂದ ಪಾರು ಮಾಡುತ್ತಾರೆ. ಡಾಕ್ಟರನ್ನು ದೂರ ಸರಿಸಿ, ಚನ್ನೇಗೌಡನ ಮೇಲೆ ಒಂದೇ ಸಮನೆ ತಮ್ಮ ಲಾಠಿಗಳಿಂದ ಬಡಿಯತೊಡಗುತ್ತಾರೆ. ಪೊಲೀಸರ ಹಲ್ಲೆಗೆ ಗುರಿಯಾದ ಚನ್ನೇಗೌಡ, ಏಟುಗಳನ್ನು ತಡೆಯಲಾರದೆ, ಕಿರುಚುತ್ತಾ ಕೆಳಕ್ಕೆ ಕುಸಿಯುತ್ತಾನೆ. ತಕ್ಷಣವೇ ರಂಗದ ಮೇಲೆ ಕತ್ತಲು ಆವರಿಸುತ್ತದೆ. ಕೆಲವು ಕ್ಷಣಗಳ ನಂತರ ರಂಗದ ಮೇಲೆ ಬೆಳಕು ವ್ಯಾಪಿಸಿದಾಗ, ಅಲ್ಲಿ ಡಾಕ್ಟರು ಮತ್ತು ಪೋಲಿಸರು ಇರುವುದಿಲ್ಲ. ನಿಂಗಣ್ಣನು ನಿರೂಪಣೆಯನ್ನು ಪ್ರಾರಂಭಿಸಿದಾಗ ಇದ್ದ ವ್ಯಕ್ತಿಗಳು ಕಂಡುಬರುತ್ತಾರೆ.]

ಹಳ್ಳಿಗ-1 : [ಚನ್ನೇಗೌಡನ ಕಡೆಗೆ ಕೈ ತೋರಿಸುತ್ತಾ]
ಇವನನ್ನ ಏನಾರ ಆಸ್ಪತ್ರೆ ಒಳಕ್ಕೆ ಕಳ್ಸುದ್ರೆ, ನೀನು ಹೇಳ್ವಂಗೆ ಆಯ್ತದೆ !

ಹಳ್ಳಿಗ-2 : [ಚನ್ನೇಗೌಡನನ್ನು ಕುರಿತು]
ಐನಾತಿ ಕೆಲ್ಸನೇ ಮಾಡೂಕೆ ಹೊಂಟಿದ್ದೀಯೆ! ಅಲ್ಲಾ ಕಣಯ್ಯ, ಡಾಕ್ಟರ ಮ್ಯಾಲೆ ನೀನು ಕೈ ಮಾಡುದ್ರೆ, ನಿನ್ಜೊತೇಲಿ ನಾವೆಲ್ಲಾ ಕಂಬಿ ಎಣಿಸಬೇಕಾಯ್ತದೆ!

ರಾಮಣ್ಣ : ಹೆಂಗಾರ ಆಗ್ಲಿ, ಹಿಂಗೆಲ್ಲಾ ಮಾಡುದ್ರೆ ನಮಗೆ ಮರ್ಯಾದೆ ತರೂ ಕೆಲ್ಸ ಅಲ್ಲ ಬುಡು.

ಚನ್ನೇಗೌಡ : ಅವನು ಲಂಚ ಕೇಳ್ತಿರೂದು ಮರ್ಯಾದೆಯೋ?

ನಿಂಗಣ್ಣ : ಮಾನ್ಗೆಟ್ಟ ಕೆಲ್ಸ, ಏನ್ ಮಾಡೀಯೆ? ವಿದ್ಯಾವಂತರೇ ಹಿಂಗಾಗವ್ರಲ್ಲ!

ಚನ್ನೇಗೌಡ : ಹಿಂಗಾಗವ್ರೆ ಅನ್ಕೊಂಡು ಸುಮ್ನಿದ್ರೆ ಚರ್ಮ ಸುಲ್ದಂಗೆ ಸುಲೀತನೆ ಇರ್ತರೆ. ಅದಕ್ಕೆ ಇಂಥಾವರ್ನ ಹಿಡ್ಕೊಂಡು ಒದಿಬೇಕು, ಬಡಿಬೇಕು.

ರಾಮಣ್ಣ : ನೋಡಪ್ಪ, ಒದಿಯೂದು ಬಡಿಯೂದು ಅದೆಲ್ಲಾ ನಡೆಯದ ಕೆಲ್ಸ, ಜೊತೆಗೆ ಕಾನೂನಿಗೆ ವಿರುದ್ಧವಾದದ್ದು.

ನಿಂಗಣ್ಣ : ಹೋಗ್ಲಿ, ಎಷ್ಟು ಜನನ್ನ ಅಂತ ಹೊಡ್ದಾಕುಬುಟ್ಟಿಯೇ? ಏನು ರಾಜ್ಯದಲ್ಲಿರೂ ಲಂಚಕೋರರ್ನೆಲ್ಲಾ ನೀನೊಬ್ನೆ ಮಟ್ಟ ಹಾಕ್ಬುಟ್ಟೀಯಾ?

ಹಳ್ಳಿಗ-2 : ನಿನ್ನ ಕೈಲಿ ಹೊಡಿಸ್ಕೊಂಡಾದ್ಮೇಲೆ, ಅವರೇನು ಕಡ್ಲೆಪುರಿ ತಿಂತಾ ಕುತ್ಕೊಂಡರೆ? ಮೊದ್ಲು ಏಟು ತಿಂದ್ರು, ಆಮೇಲೆ ಕಂಪ್ಲೆಂಟ್ ಕೊಡ್ತರೆ; ಪೊಲೀಸ್ನೋರು ಬತ್ತರೆ; ಹೊಡ್ದೋರ್ ಮ್ಯಾಲೆ ಕೇಸ್ ಹಾಕ್ತರೆ; ತಿಂಗಳಾರುಗಟ್ಟಲೆ ಕೋರ್ಟಿಗೆ ಅಲಿಸ್ತಾರೆ; ಜೈಲಿಗೆ ಹಾಕ್ತರೆ.

ಚನ್ನೇಗೌಡ : ಹಾಕ್ಲಿ ಬುಡು. ಇಲ್ಲಿ ಸಾಯೋ ಬದ್ಲು. ಜೈಲಲ್ಲೆ ಸಾಯ್ಕ!

ಹಳ್ಳಿಗ-1 : ಈಗ ಒಬ್ಬ ಸತ್ತಿರೋದು ಸಾಕಲ್ಲ ಅಂತ, ನೀನು ಬ್ಯಾರೆ ಸಾಯೂಕೆ ಹೋಗವೆ?

ರಾಮಣ್ಣ : ಚನ್ನೇಗೌಡ, ನಿನ್ತಾವಿರು ದುಡ್ಡು ಬೋರಣ್ಣನ ಕೈಗೆ ಕೊಡಪ್ಪ. ಎತ್ತಾಗರ ಬೇಕಾಯ್ತದೆ.

ಚನ್ನೇಗೌಡ : [ತಾನು ಸಂಗ್ರಹಿಸಿದ್ದ ಎರಡು ಸಾವಿರ ರೂಗಳನ್ನು ಬೋರಣ್ಣನವರಿಗೆ ಕೊಡುತ್ತ] ತಕೊಳಿ, ಆದ್ರೆ ಅವನ್ಗೆ ಸುಮ್ನೆ ಮಾತ್ರ ಕೊಡ್ಬೇಡಿ. ಬಾಯ್ಗೆ ಬಂದಂಗೆ ಉಗುದ್ಬುಟ್ಟಾದ್ರು ಕೊಡಿ.

ಹಳ್ಳಿಗ-2 : ಹಿಂಗೆ ಮಾತಲ್ಲೆ ಕಾಲ ಕಳ್ದಿರೋ, ಏನಾದ್ರು ಬಗೆಹರಿಯೋ ದಾರಿ ನೋಡ್ತಿರೊ?

ಶಿವಲಿಂಗ : ಹೋಗ್ಲಿ ಹಿಂಗೆ ಮಾಡುದ್ರೆ ಹೆಂಗೆ?

ಹಳ್ಳಿಗ-1 : ಇಷ್ಟೊತ್ತು ಅವನ್ದ ಕೇಳುದ್ದಾಯ್ತು. ಈಗ ನೀನು ಶುರು ಮಾಡ್ದ?

ಶಿವಲಿಂಗ : ಥೂ ಯಾಕ್ರಯ್ಯ, ಹಿಂಗೆ ಮಾತಾಡೂಕೆ ಮುಂಚೇನೆ ಮೊಕ ಮುರಿತೀರಿ. ಒಸಿ ಕೇಳ್ರೋ ಮಾರಾಯರ.

ಬೋರಣ್ಣ : ಅದೇನು ಹೇಳಪ್ಪ. ಕಷ್ಟ ಕಾಲದಲ್ಲಿ ಒಬ್ಬನದಲ್ಲ, ಇನ್ನೊಬ್ಬನ ಮಾತ ಕೇಳಲೇಬೇಕು. ಆಗ ಯಾವುದಾದ್ರು ಒಂದು ದಾರಿ ತೋರ್ತದೆ.

ಹಳ್ಳಿಗ-2 : ನಿಂದೇನು ಹೇಳಪ್ಪ. ಸರಿ ಕಂಡ್ರೆ ಹಂಗೆ ಮಾಡವ.

ಶಿವಲಿಂಗ : ನೋಡಿ, ನೀವು ಹೇಳ್ದಂಗೆ ಕಾನೂನ ನಮ್ಮ ಕೈಗೆ ತಕೊಂಡು, ಈ ಡಾಕ್ಟರ ಹೊಡೆಯೊದು ಬ್ಯಾಡ. ನಾವೆಲ್ಲ ಈಗ ಜೊತೆಯಾಗಿ ತಹಶೀಲ್ದಾರ್ ಕಛೇರಿಗೆ ಹೋಗೋಣ ಬನ್ನಿ. ಪೇಟೆ ಬೀದಿ ಉದ್ದಕ್ಕೂ ಲಂಚಕೋರ ಡಾಕ್ಟರ್ಗೆ ಧಿಕ್ಕಾರ ಹಾಕುತ್ತಾ, ತಹಶೀಲ್ದಾರ್ ಕಛೇರಿ ಮುಂದೆ ಶಾಂತಿಯುತವಾಗಿ ಧರಣಿ ಹೂಡೋಣ ನಡೀರಿ.

ಹಳ್ಳಿಗ-1 : ಅಲ್ಲಿಗ್ಹೋದ್ರೆ ಏನಾದದು?

ಶಿವಲಿಂಗ : ತಾಲ್ಲೂಕು ಕಛೇರಿ ಮುಂದೆ ಧರಣಿ ಕುಂತ್ಕೊಂಡ್ರೆ, ತಹಶೀಲ್ದಾರರೇ ನಮ್ತಕೆ ಬರ್ತರೆ. ಆಗ ಅವರ್ಗೆ ನಮ್ಮ ಅಹವಾಲು ಹೇಳ್ಕೊಂಡ್ರೆ, ಅವರೇ ಬಂದು ಶವ ಪರೀಕ್ಷೆ ಮಾಡೋಕೆ ಆರ್ಡರು ಮಾಡ್ತಾರೆ.

ಹಳ್ಳಿಗ-2 : ಆರ್ಡರು ಮಾಡುದ್ರೇನೊ ಸರಿ. ಅವನು ಇಂಥಾ ಲಂಚಕೋರನೇ ಆಗಿದ್ರೆ?

ಶಿವಲಿಂಗ : ಸರ್ಕಾರದಲ್ಲಿ ಕೆಲಸ ಮಾಡೋರೆಲ್ಲಾ ಲಂಚಕೋರರೆ ಆಗಿದ್ದರೆ? ಅಲ್ಲೂ ಒಳ್ಳೆಯವರು, ಪ್ರಾಮಾಣಿಕರು, ಕರ್ತವ್ಯ ಪ್ರಜ್ಞೆ ಇರೂರು ಬೇಕಾದಷ್ಟು ಜನ ಅವರೆ.

ನಿಂಗಣ್ಣ : ನೀನು ಹೇಳೂದು ಒಂಥರ ಸರಿ ಕಣಪ್ಪ. ಆದರೆ ರಸ್ತೆಗೆ ನಾವೆಲ್ಲ ಗುಂಪಾಗಿ ಇಳುದ್ರೆ, ಅದು ಇನ್ನೊಂದು ಥರ ಆಯ್ತದೆ!

ಚನ್ನೇಗೌಡ : ನೀವೇನು? ಎಲ್ಲದಕ್ಕೂ ಅಡರ್ಗಾಲು ಹಾಕ್ತೀರಿ! ಹೋದ್ರೆ ಏನಾಗ್ಬುಟ್ಟದು?

ನಿಂಗಣ್ಣ : ನೋಡಪ್ಪ, ನಿಂದು ಇನ್ನೂ ಬಿಸಿ ರಕ್ತ. ಅದಕ್ಕೆ ಹಿಂಗೆ ಎಗರಾಡ್ತೀಯೆ. ನಾನ್ ಹೇಳೂದ ಒಸಿ ನಿಗ ಇಟ್ಟು ಕೇಳು.

ಶಿವಲಿಂಗ : ಲೋ ಚೆನ್ನ, ನೀನು ಸುಮ್ಮನಿರು. ಅದೇನು ಹೇಳಿ ನಿಂಗಣ್ಣ?

ನಿಂಗಣ್ಣ : ನಾವೆಲ್ಲಾ ಡಾಕ್ಟರ್ಗೆ ಧಿಕ್ಕಾರ ಹಾಕ್ಕೊಂಡು ಪ್ಯಾಟೆ ಬೀದೀಲಿ ಹೊಯ್ತಾ ಇದ್ದಂಗೆ, ಏನಾಯ್ತದೆ ಗೊತ್ತೆ?

ಚನ್ನೇಗೌಡ : ಏನಾಗ್ಬುಟ್ಟದು?

ನಿಂಗಣ್ಣ : ನೀನು ಇಲ್ಲೆ ಹಿಂಗಾಡೂನು, ಇನ್ನು ಅಲ್ಲಿಗೆ ಹೋದ್ಮೇಲೆ ಹೆಂಗಾಡ್ತೀಯೆ ಗೊತ್ತೆ? ಅಲ್ಲಿ ಏನೇನು ಆಯ್ತದೆ ಅನ್ನೋದ, ನಾನಿಲ್ಲೆ ಮೊದ್ಲೆ ಹೇಳ್ತೀನಿ ಕೇಳು.
[ರಂಗದ ಮೇಲೆ ಕತ್ತಲು ಆವರಿಸುತ್ತದೆ. ಕ್ಷಣಕಾಲದ ನಂತರ ರಂಗದ ಮೇಲೆ ಬೆಳಕು ವ್ಯಾಪಿಸುತ್ತದೆ. ಅಲ್ಲಿದ್ದವರೆಲ್ಲರೂ ಯುವಕ ಸಂಘದ ಸದಸ್ಯರ ನೇತೃತ್ವದಲ್ಲಿ ಸಾಲಾಗಿ ನಿಲ್ಲುತ್ತಾರೆ. ಶಿವಲಿಂಗ ಮತ್ತು ಚನ್ನೇಗೌಡ ಘೋಷಣೆಗಳನ್ನು ಕೂಗುತ್ತಾ, ಆ ಗುಂಪನ್ನು ಆಸ್ಪತ್ರೆಯಿಂದ ತಾಲ್ಲೂಕು ಕಛೇರಿಯತ್ತ ಮುನ್ನಡೆಸುತ್ತಾರೆ]

ಶಿವಲಿಂಗ : ಲಂಚಕೋರ ವೈದ್ಯಾಧಿಕಾರಿಗೆ....

ಎಲ್ಲರು : ಧಿಕ್ಕಾರ.

ಚನ್ನೇಗೌಡ : ಹೆಣ ಕುಯ್ಯಲು ಹಣ ಕೇಳುತ್ತಿರುವ ರಣ ಹದ್ದಿಗೆ-

ಎಲ್ಲರು : ಧಿಕ್ಕಾರ.

ಶಿವಲಿಂಗ : ಜನತೆಗೆ ದ್ರೋಹ ಬಗೆಯುತ್ತಿರುವ ಲಂಚಕೋರ ವೈದ್ಯಾಧಿಕಾರಿಗೆ....

ಎಲ್ಲರು : ಧಿಕ್ಕಾರ.

ಚನ್ನೇಗೌಡ : ಎಂಜಲು ಕಾಸಿಗೆ ಬಾಯ್ಬುಡುವ ಸಮಾಜದ್ರೋಹಿಗೆ....

ಎಲ್ಲರು : ಧಿಕ್ಕಾರ.

ಶಿವಲಿಂಗ : ಲಂಚಕೋರ ವೈದ್ಯಾಧಿಕಾರಿಗೆ....

ಎಲ್ಲರು : ಧಿಕ್ಕಾರ.

[ಈ ರೀತಿ ಧಿಕ್ಕಾರ ಹಾಕುತ್ತಾ, ಗುಂಪು ಪೇಟೆ ಬೀದಿಯ ಉದ್ದಕ್ಕೂ ಸಾಗುತ್ತಿದ್ದಂತೆಯೇ, ಪೇಟೆಯಲ್ಲಿದ್ದ ಜನಜಂಗುಳಿ ಇವರತ್ತ ಅಚ್ಚರಿ ಮತ್ತು ಕುತೂಹಲದಿಂದ ನೋಡತೊಡಗುತ್ತಾರೆ. ಹಲವರು ಮುಂದೆ ಬಂದು "ಇದೇನೆಂದು" ಒಂದೆರಡು ಪ್ರಶ್ನೆಗಳ ಮೂಲಕ ವಿಚಾರಿಸುತ್ತಾರೆ. ಗುಂಪು ಮುಂದೆ ಮುಂದೆ ಸಾಗುತ್ತಿದ್ದಂತೆಯೇ, ಕೆಲವು ಅಪರಿಚಿತ ವ್ಯಕ್ತಿಗಳು ಗುಂಪಿನ ಜೊತೆ ಸೇರಿಕೊಂಡು, ತಾವು ಧಿಕ್ಕಾರ ಹಾಕುತ್ತ ಸಾಗ ತೊಡಗುತ್ತಾರೆ.]

ಹಳ್ಳಿಗ-1 : ಶಿವಲಿಂಗ, ಇವರ್‍ಯಾರು ಇಷ್ಟೊಂದು ಜನ ಹೊಸುಬ್ರು ಸೇರ್‍ಕೊಂಡ್ರಲ್ಲ?

ಶಿವಲಿಂಗ : ಆ ಡಾಕ್ಟರು ಇವರ್‍ತಾವು ಯಾವತ್ತಾದ್ರು ಸುಲಿದಿದ್ದನೋ ಏನೋ? ಈಗೇನು ಬರ್‍ಲಿ ಬುಡಿ. ಜನ ಹೆಚ್ಚಾದಷ್ಟು ನಮ್ಮ ಹೋರಾಟಕ್ಕೆ ಮತ್ತಷ್ಟು ಶಕ್ತಿ ಬಂದಂಗಲ್ಲವೆ?

[ಮತ್ತೆ ಘೋಷಣೆಗಳನ್ನು ಕೂಗತೊಡಗುತ್ತಾನೆ. ಗುಂಪು ಮತ್ತಷ್ಟು ಆಕ್ರೋಶದಿಂದ ಧಿಕ್ಕಾರ ಹಾಕುತ್ತದೆ. ಗುಂಪಿನ ಆಕ್ರೋಶ ಈಗ ಹಂತ ಹಂತವಾಗಿ ಸಾಮೂಹಿಕ ಸನ್ನಿಯಾಗಿ ಪರಿವರ್ತನೆಗೊಳ್ಳತೊಡಗುತ್ತದೆ. ಧಿಕ್ಕಾರದ ಧ್ವನಿ ಮತ್ತಷ್ಟು ಕರ್ಕಶವಾಗುತ್ತದೆ.]

ಚನ್ನೇಗೌಡ : ಹೆಣ ಕುಯ್ಯಲು ಹಣ ಕೇಳುವ ರಣಹದ್ದಿಗೆ....

ಎಲ್ಲರು : ಧಿಕ್ಕಾರ.

ಶಿವಲಿಂಗ : ಲಂಚಕೋರ ವೈದ್ಯಾಧಿಕಾರಿಗೆ....

ಎಲ್ಲರು : ಧಿಕ್ಕಾರ.

[ಅಷ್ಟರಲ್ಲಿ ಆ ಗುಂಪಿಗೆ ಹೊಸದಾಗಿ ಸೇರಿಕೊಂಡಿದ್ದ ಒಬ್ಬ ವ್ಯಕ್ತಿ ರಂಗದ ಒಳಬದಿಯತ್ತ ನೋಡುತ್ತಾ, ಜೋರಾಗಿ ಕೂಗತೊಡಗುತ್ತಾನೆ.]

ವ್ಯಕ್ತಿ-1 : ಲೊ.... ನೋಡ್ರೋ.... ಅತ್ಲಿಂದ ಗೌರ್ಮೆಂಟ್ ಬಸ್ ಬತ್ತಾದೆ. ಅದ ಅಡ್ಡ ಹಾಕಿ ನಿಲ್ಸಿ. ಅದರ ಮೇಲೆಲ್ಲಾ ಈ ಲಂಚಕೋರ ಡಾಕ್ಟರ್ಗೆ ಧಿಕ್ಕಾರ ಅಂತ ಬರೆಯೋಣ.

ವ್ಯಕ್ತಿ-2 : ಬರಿ ಅಷ್ಟೆ ಅಲ್ಲ. ಒಂದು ಘಂಟೆ ರಸ್ತೆ ತಡೆ ಚಳುವಳಿ ಮಾಡೋಣ.

ವ್ಯಕ್ತಿ-1 : ಸರ್ಕಾರಕ್ಕೆ....

ಎಲ್ಲರು : ಧಿಕ್ಕಾರ.

ವ್ಯಕ್ತಿ-2 : ಆರೋಗ್ಯ ಮಂತ್ರಿಗೆ....

ಎಲ್ಲರು : ಧಿಕ್ಕಾರ

ವ್ಯಕ್ತಿ-1 : ಅಡ್ಡ ಹಾಕ್ರೊ ಬಸ್ನ.

[ರಂಗದ ಒಳಭಾಗಕ್ಕೆ ಕೆಲವರು ಜೋರಾಗಿ ಕೂಗುತ್ತಾ ನುಗ್ಗುತ್ತಾರೆ. ರಂಗದ ಒಳಭಾಗದಿಂದ ಈ ಕೆಳಕಂಡ ಮಾತುಗಳು ದೊಡ್ಡ ಧ್ವನಿಯಲ್ಲಿ ಕೇಳಿಬರತೊಡಗುತ್ತವೆ.]

ಧ್ವನಿ-1 : ಲೇ.... ಡ್ರೈವರ್ ನಿಲ್ಲಿಸ್ಲ ಬಸ್ಸ. ಇಳೀಲಾ ಕೆಳಕ್ಕೆ.

[ಬಸ್ಸಿನ ಬಾಡಿಯನ್ನು ಹಲವರು ಡಬಡಬನೆ ಬಡಿಯುತ್ತಿರುವ ಶಬ್ದ ಕೇಳಿಬರುತ್ತದೆ]

ಡ್ರೈವರ್ : (ಬಸ್ಸನ್ನು ನಿಲ್ಲಿಸಿ)

ಅಣ್ಣೋ.... ಬ್ಯಾಡಿ ಕಣ್ರಣ್ಣಾ.... ಬಸ್ಸಿಗೇನೂ ಮಾಡ್ಬೇಡಿ.... ನಿಮ್ಮ ದಮ್ಮಯ್ಯ ಅಂತೀನಿ.... ನಿಮಗೆ ಕೈ ಮುಗೀತೀನಿ.

ಧ್ವನಿ-2 : ಓಹೋಹೋ.... ಇವರಪ್ಪಂದು ಬಸ್ಸು. ಇಳೀಲೆ ಕೆಳಕ್ಕೆ.

ಧ್ವನಿ-3 : ಅವನ್ನೇನು ಕೇಳ್ತೀರೋ.... ಎಳ್ದಾಕ್ರೊ ಬಡ್ಡಿಹೈದನ್ನ.

ಡ್ರೈವರ್ : ಅಣ್ಣೋ.... ಅಣ್ಣೋ.... ಬ್ಯಾಡಿ ಕಣ್ರಣ್ಣಾ.

ಧ್ವನಿ-1 : ಬಸ್ಸಿನಲ್ಲಿ ಇರೋರೆಲ್ಲಾ ಬೇಗ ಬೇಗ ಕೆಳಕ್ಕೆ ಇಳೀರಪ್ಪ.
[ಅಷ್ಟರಲ್ಲಿ ನಾಲ್ಕಾರು ಕಲ್ಲುಗಳು ಬಸ್ಸಿಗೆ ಬಂದು ಬಡಿದ ಧ್ವನಿ ಮತ್ತು ಹೆಂಗಸರು, ಮಕ್ಕಳು ಜೋರಾಗಿ ಅರಚುತ್ತಿರುವ ಶಬ್ದ ಕೇಳಿಬರುತ್ತದೆ.]

ಧ್ವನಿ-2 : ಲೇ, ಎಲ್ಲಾರು ಇಳ್ದಾಯ್ತು.... ಹಾಕ್ರಲಾ ಬಸ್ಸಿಗೆ ಬೆಂಕಿಯ... ಸರ್ಕಾರಕ್ಕೆ ಸರಿಯಾಗಿ ಬುದ್ಧಿ ಕಲಿಸಿದಂಗಾಯ್ತದೆ.

ಶಿವಲಿಂಗ : ಬ್ಯಾಡಿ ಕಣ್ರಯ್ಯ, ನಿಮ್ಮ ದಮ್ಮಯ್ಯ ಅಂತೀನಿ. ಬಸ್ಸಿಗೆ ಬೆಂಕಿ ಹಾಕ್ಬೇಡಿ.

ಧ್ವನಿ-1 : ಏ.... ಅವನ್ಯಾರ್ಲ ಬಸ್ಸಿಗೆ ಬೆಂಕಿ ಹಾಕ್ಬೇಡಿ ಅನ್ನೋನು?

ಧ್ವನಿ-2 : ಬಸ್ಗೆ ಬೆಂಕಿ ಎಟ್ಬುಟ್ಟು, ಎತ್ತಿ ಎಸಿರ್ಲಾ ಅವನನ್ನ ಅದರೊಳಾಕೆ.
[ಕರ್ಕಶದ ಕೂಗಿನ, ಕೇಕೆಯ, ಸಿಳ್ಳೆಯ ಧ್ವನಿಗಳು ಒಂದೇ ಸಮನೆ ಕೇಳಿ ಬರುತ್ತಿರುತ್ತದೆ.]

ಧ್ವನಿ-1 : ಎರಚುರ್ಲ ಸೀಮೆ ಎಣ್ಣೆಯ.... ಎಟ್ಟುರ್ಲ ಬೆಂಕಿಯ....

ಅನೇಕ ಧ್ವನಿಗಳು: ಓಹೋಹೋ.... ಟೈರ್ಗಳು ಹತ್ಕೊಂಡೊ.... ಬಸ್ಸೆ ಹತ್ಕೋತು.... ಓಹೋಹೋ.

[ಪೋಲಿಸ್ ವ್ಯಾನುಗಳು ಬರುವ ಸೈರನ್ ಕೂಗು ಕೇಳಿ ಬರುತ್ತದೆ]

ಧ್ವನಿ-2 : ಅಯ್ಯಯ್ಯೋ.... ರಿಸರ್ವ್ ಪೋಲಿಸ್ ವ್ಯಾನ್ ಬತ್ತಾದೆ ಓಡುರ್ಲಾ.... ಓಡಿ.... ಓಡಿ....
[ದೊಡ್ಡ ಗದ್ದಲವಾಗುತ್ತಿದ್ದಂತೆಯೇ, 'ಫೈರ್' ಎಂಬ ಆಜ್ಞೆ ಕೇಳಿಬರುತ್ತದೆ. ಆಜ್ಞೆಯ ಬೆನ್ನಲ್ಲೆ ಗೋಲಿಬಾರ್ ಆಗತೊಡಗುತ್ತದೆ. ರಂಗದ ಒಳಗಿನಿಂದ ಹತ್ತಾರು ಮಂದಿ, ರಂಗದ ಮೇಲೆ ನುಗ್ಗಿ ಬರುತ್ತಾರೆ. ಅವರಲ್ಲಿ ನಾಲ್ಕೈದು ಮಂದಿ ಪೋಲಿಸರ ಗುಂಡಿಗೆ ಬಲಿಯಾಗಿ ಕೆಳಕ್ಕೆ ಉರುಳುತ್ತಾರೆ. ಈಗ ರಂಗದ ಮೇಲೆ ಸ್ವಲ್ಪ ಕಾಲ

ಕತ್ತಲು ಆವರಿಸುತ್ತದೆ. ನಿಶ್ಯಬ್ದ ವಾತಾವರಣ. ಕ್ಷಣಕಾಲದ ನಂತರ ರಂಗದಮೇಲೆ ಬೆಳಕು ವ್ಯಾಪಿಸಿದಾಗ ನಿಂಗಣ್ಣನವರು ನಿರೂಪಣೆಯನ್ನು ಪ್ರಾರಂಭಿಸಿದಾಗ ಇದ್ದ ಸ್ಥಿತಿಯಲ್ಲಿಯೇ ಎಲ್ಲರೂ ಕಂಡುಬರುತ್ತಾರೆ.]

ಹಳ್ಳಿಗ-1 : ನಿಂಗಣ್ಣ, ಈಗ ನೀನು ಹೇಳ್ದಲ್ಲಾ, ಹಂಗೇನೆ ಆಗೂದು. ನಾವು ರಸ್ತೆಗೆ ಏನಾದ್ರು ಹೋದ್ರೆ ಈಗ ಇರೋ ಒಂದು ಹೆಣದ ಜೊತೆಗೆ, ಇನ್ನು ನಾಕಾರು ಹೆಣ ಬೀಳ್ತವೆ.

ನಿಂಗಣ್ಣ : ನಾವು ರಸ್ತೆಗೆ ಹೋಯ್ತಿದ್ದಂಗೆ ಗೂಂಡಾಗಳು, ರೌಡಿಗಳು, ಕೇಡಿಗಳು ನಮ್ ಜೊತೇಲಿ ಸೇರ್ಕೊಂಡು ಮಾಡಬಾರದ್ದ ಮಾಡ್ಬುಡ್ತರೆ. ಇಂಥಾ ಅವಕಾಶಕ್ಕೆ ಕಾಯ್ತಿರ್ತರೆ ಅವರು. ಅದಕ್ಕೆ ನಾನು ಇದ ಬ್ಯಾಡ ಅನ್ನೋದು.

ರಾಮಣ್ಣ : ಅದೂ ಅಲ್ಲದೆ, ರಸ್ತೆ ತಡೆ ಮಾಡುದ್ರೆ, ಪಾಪ...ಯಾವ ಯಾವ ಕಡೆಯಿಂದ್ಲೊ ಹೋಯ್ತಾಬತ್ತಾ ಇರೋ ಜನವೆಲ್ಲಾ ಕಷ್ಟಕ್ಕೆ ಸಿಗಾಕೊತರೆ. ಇನ್ನು ಬಸ್ಸು ಸುಟ್ರೆ ಯಾರ್ಗಪ್ಪ ಹಾನಿ? ನಮಗೆ ಅಲ್ಲವೇ? ನಮ್ಮ ಜನಗಳ ದುಡ್ಡಲ್ವೆ ಅದು?

ಶಿವಲಿಂಗ : ಹೊಡೆಯೋದು ಬ್ಯಾಡ, ಧಿಕ್ಕಾರ ಹಾಕೋದು ಬ್ಯಾಡ, ಧರಣಿ ಹೂಡೋದು ಬ್ಯಾಡ. ಹಂಗಾದ್ರೆ ಇಂಥಾ ಅನ್ಯಾಯಗಳ ಎದುರಿಸೋದು ಹೆಂಗೆ?
[ಈ ರೀತಿ ಮಾತುಕತೆ ನಡೆಯುತ್ತಿದ್ದಂತೆಯೇ, ಅಲ್ಲಿಗೆ ಆ ಊರಿನ ನಾಗರಿಕ ಸಮಿತಿಯ ಅಧ್ಯಕ್ಷರಾದ ರಾಜಣ್ಣ ಮತ್ತು ಮೇಷ್ಟ್ರು ನರಸಿಂಹಯ್ಯ ಬರುತ್ತಾರೆ]

ರಾಜಣ್ಣ : ನಮಗೆ ಈಗ್ತಾನೆ ಸುದ್ದಿ ಗೊತ್ತಾಯ್ತು.

ನಿಂಗಣ್ಣ : ಯಾಕೆ ಊರಲ್ಲಿ ಇರಲಿಲ್ಲವೇ?

ಮೇಷ್ಟ್ರು : ಇರಲಿಲ್ಲ. ಬೆಂಗಳೂರಿಗೆ ಹೋಗಿದ್ದೊ, ಹೆಣ ಕೊಟ್ರೆ?

ಚನ್ನೇಗೌಡ : ಇನ್ನೊಂದು ಹೆಣ ಬೀಳೋತನಕ, ಈ ಹೆಣ ಎಲ್ಲಿ ಕೊಟ್ಟರು!

ರಾಜಣ್ಣ : ಯಾಕಪ್ಪ, ಹಿಂಗಂತೀಯೆ?

ಚನ್ನೇಗೌಡ : ನಿಂಗಣ್ಣನ್ನೆ ಕೇಳಿ, ಎಲ್ಲಾನು ಹೇಳ್ತರೆ.

ರಾಜಣ್ಣ : ಏನು ನಿಂಗಣ್ಣ? ಏನು ನಡೀತು?

[ನಿಂಗಣ್ಣನವರು ಇದುವರೆಗೆ ನಡೆದಿದ್ದ ಮಾತುಕತೆ ಎಲ್ಲವನ್ನು ರಾಜಣ್ಣ ಮತ್ತು ಮೇಷ್ಟ್ರಿಗೆ ಸವಿವರವಾಗಿ ನಿರೂಪಿಸುತ್ತಾರೆ.]

ರಾಮಣ್ಣ : ಮೇಷ್ಟ್ರೇ, ಈಗ ನಾವೇನು ಮಾಡ್ಬೇಕು ಅನ್ನೂದ ನೀವೇ ಹೇಳಿ.

ಮೇಷ್ಟ್ರು : ನಾನೇನು ಹೇಳೂಕಾಗುತ್ತೆ? ಆ ಡಾಕ್ಟರು ಕೇಳ್ದಂಗೆ ದುಡ್ಡು ಕೊಟ್ಬುಡಿ ಅನ್ನನೆ! ಬೇಡ, ಚನ್ನೇಗೌಡ ಹೇಳ್ದಂಗೆ ಡಾಕ್ಟರ ಹಿಡ್ಕೊಂಡು ಚಚ್ಚೊದೆ ಸರಿ ಅಂತ ಹೇಳನೆ!

ಹಳ್ಳಿಗ-2 : ಇಂಥಾ ಸಮಯದಲ್ಲಿ ತಿಳ್ದೋರು, ನಿಮ್ಮಂಥವ್ರು "ಹಿಂಗಲ್ಲ ಹಿಂಗ್ಮಾಡಿ" ಅಂತ ಹೇಳ್ಬೇಕು.

ಮೇಷ್ಟ್ರು : ಇಂಥಾ ಸಂದರ್ಭಗಳಲ್ಲಿ ನಮ್ಮ ತಿಳುವಳಿಕೆ ಯಾವ ಪ್ರಯೋಜನಕ್ಕೂ ಬರೋದಿಲ್ಲ ಕಣಪ್ಪ. "ಬೇಲಿಯೇ ಎದ್ದು ಹೊಲ ಮೇದಂಗೆ" ಯಾರು ಜನಕ್ಕೆ ಒಳ್ಳೇದು ಮಾಡ್ಬೇಕಾಗಿತ್ತೋ, ಅವರೇ ಹೀಗೆ ಲಂಚ ರುಶುವತ್ತು ಅಂತ ಕೇಡು ಮಾಡೋಕೆ ನಿಂತ್ಕೊಂಡ್ರೆ, ಯಾರ್ತಾನೆ ಏನು ಮಾಡೋಕಾದದು?

ಚನ್ನೇಗೌಡ : ಹಂಗಂತ ಕೈಕಟ್ಕೊಂಡು ಸುಮ್ಮನಾಗ್ಬುಡುದೇ?

ಶಿವಲಿಂಗ : ಅವನ್ಗೆ ಏನಾದ್ರು ಒಂದು ಮಾಡ್ಲೇಬೇಕು ಇವತ್ತು.

ರಾಜಣ್ಣ : ನೀವಿಬ್ರು ಸ್ವಲ್ಪ ಸಮಾಧಾನವಾಗಿರಪ್ಪ. ಆವೇಶಪಡ್ಬೇಡಿ.
[ರಾಜಣ್ಣನವರು ಮೇಷ್ಟ್ರ ಜೊತೆಯಲ್ಲಿ ಕೆಲವು ಕ್ಷಣಗಳ ಕಾಲ ಪಿಸುಧ್ವನಿಯಲ್ಲಿ ಮಾತನಾಡುತ್ತಾರೆ. ರಾಜಣ್ಣನವರ ಮಾತುಗಳಿಗೆ ಮೇಷ್ಟ್ರು ತಮ್ಮ ಒಪ್ಪಿಗೆಯನ್ನು ಸೂಚಿಸುವಂತೆ ತಲೆಯಾಡಿಸುತ್ತಾರೆ.]

ರಾಜಣ್ಣ : ಈಗ ನೀವ್ಯಾರು ಏನು ದುಡುಕ್ಬೇಡಿ. ಇಷ್ಟಕ್ಕೆಲ್ಲಾ ತಲೆ ಕೆಡಿಸ್ಕೊಂಡ್ರೆ ಹೆಂಗೆ? ಒಂದು ತಪ್ಪು ಸರಿಮಾಡೋಕೆ ಹೋಗಿ, ಮತ್ತೊಂದು ತಪ್ಪು ಮಾಡ್ಬಾರದು. ಈಗ ನಾನು ಹೇಳೂ ತರ ಮಾಡಿ.

ಶಿವಲಿಂಗ : ಏನು ಹೇಳಿ?

ಚನ್ನೇಗೌಡ : ಏನ್ಮಾಡ್ಬೇಕು ಹೇಳಿ?

ರಾಜಣ್ಣ : ಹಿಂಗೆ ಯಾಕೆ ಉದ್ರೇಕಪಡ್ತೀರಿ. ಸ್ವಲ್ಪ ಸುಮ್ನಿರಿ.
[ಹುಡುಗನ ಚಿಕ್ಕಪ್ಪ ಬೋರಣ್ಣನವರನ್ನು ಕುರಿತು]
ನೋಡಿ, ಈಗ ನಿಮ್ಮತ್ರ ದುಡ್ಡಿದ್ರೆ ಸರಿ. ಇಲ್ದೇದ್ರೆ ನಾನೇ ಕೊಡ್ತೀನಿ. ತಕೊಂಡು ಹೋಗಿ ಆ ಡಾಕ್ಟರ್ಗೆ ಕೊಟ್ಬುಟ್ಟು ಬೇಗ ಬೇಗ ಹೆಣ ತಕೊಂಡು, ಮೊದಲು ದಪನ್ ಮಾಡೋದು ನೋಡಿ.

ಶಿವಲಿಂಗ : ಇದೇನ್ ಸಾ? ನಿಮ್ಮ ಬಾಯಲ್ಲಿ ಇಂಥಾ ಮಾತು?

ರಾಜಣ್ಣ : ನಾನು ಹೇಳ್ದಂಗೆ ಮಾಡಿ ಈಗ. ಮುಂದೇನು ಮಾಡ್ಬೇಕು ಅನ್ನೋದು ನಂಗೆ ಗೊತ್ತದೆ, ನಾನು ಮಾಡಿ ತೋರಿಸ್ತೀನಿ.

ನಿಂಗಣ್ಣ : ನೋಡಪ್ಪ, ಈಗ ಇನ್ನೇನು ರಗಳೆ ಮಾಡೋದು ಬ್ಯಾಡ. ಇವರು ಹೇಳ್ದಂಗೆ ಮಾಡವ ನಡೀರಿ.

ಚನ್ನೇಗೌಡ : ಥೂ, ಹಿಂಗೆಲ್ಲಾ ಬದುಕೂಕಿಂತ, ಸಾಯೋದೆ ಮೇಲಪ್ಪ.

ಹಳ್ಳಿಗ-1 : ಯಾಕರ್ಲ ಸಾಯ್ತೀನಿ.... ಸಾಯ್ತೀನಿ ಅಂತಾನೆ ಇರ್ತೀರಿ! ಬದುಕು ಮಾತಾಡ್ರೋ ಬಡ್ಡತ್ತವ.

ರಾಜಣ್ಣ : ಇನ್ನು ನೀವು ಹೋಗಿ ಬೋರಣ್ಣ, ಡಾಕ್ಟರ್ಗೆ ದುಡ್ಡು ಕೊಟ್ಬುಟ್ಟು ಬರೋಗಿ. ಶಿವಲಿಂಗ ಚನ್ನೇಗೌಡ.... ನೀವಿಬ್ರೂ ಹೋಗಿ, ಯಾವುದಾದ್ರು ಒಂದು ಲಾರಿ ತಕೊಂಡು ಬರೋಗಿ. ಹೆಣಾನು ಹಾಕೊಂಡು ಇಲ್ಲಿರೂರೆಲ್ಲಾ ಅದರಲ್ಲೆ ಕುತ್ಕೊಂಡೊ, ನಿಂತ್ಕೊಂಡೊ ಜೊತೇಲಿ ಹೋಗಬಹುದು.
[ರಂಗದ ಎಡಬದಿಯಿಂದ ಆಸ್ಪತ್ರೆಯ ಒಳಕ್ಕೆ ಬೋರಣ್ಣನವರು ಹೋಗುತ್ತಾರೆ. ಇತ್ತ ಶಿವಲಿಂಗ ಮತ್ತು ಚನ್ನೇಗೌಡ ರಂಗದ ಬಲಬದಿಯತ್ತ ಲಾರಿಯನ್ನು ತರಲೆಂದು ಹೊರಡುತ್ತಿದ್ದಂತೆಯೇ ರಂಗದ ಮೇಲೆ ಕತ್ತಲು ಆವರಿಸುತ್ತದೆ. ಇಲ್ಲಿಗೆ ನಾಟಕದ ಮೊದಲನೆಯ ಅಂಕ ಮುಕ್ತಾಯಗೊಳ್ಳುತ್ತದೆ. ಬೋರಣ್ಣನವರಿಂದ ಎರಡು ಸಾವಿರ ರೂಗಳನ್ನು ಪಡೆದ ಡಾಕ್ಟರ್, ಅನಂತರ ಶವ ಪರೀಕ್ಷೆ ಮಾಡಿ ಹೆಣವನ್ನು ವಾರಸುದಾರರಿಗೆ ನೀಡುತ್ತಾರೆ. ಹೆಣವನ್ನು ಅಂದೇ ಹಳ್ಳಿಗೆ ತೆಗೆದುಕೊಂಡು ಹೋಗಿ ಸಂಸ್ಕಾರ ಮಾಡಲಾಗುತ್ತದೆ. ಒಂದು ವಾರದ ನಂತರ ಶವ ಪರೀಕ್ಷೆಯ ಮೆಡಿಕಲ್ ರಿಪೋರ್ಟ್ ಅನ್ನು ವೈದ್ಯರಿಂದ ಬೋರಣ್ಣ

ಪಡೆಯುತ್ತಾರೆ. ಹದಿನೈದು ದಿನಗಳ ನಂತರ ನಾಟಕದ ಎರಡನೆಯ ಅಂಕದ ಘಟನೆಗಳು ಮುಂದುವರಿಯುತ್ತವೆ.]

ಅಂಕ - ಎರಡು

[ಸರ್ಕಾರಿ ಆಸ್ಪತ್ರೆಯ ಒಳ ಕೊಠಡಿ. ವೈದ್ಯರು ರೋಗಿಯೊಬ್ಬನ ಪರೀಕ್ಷೆಯಲ್ಲಿ ಮಗ್ನರಾಗಿದ್ದಾರೆ. ಸಮೀಪದಲ್ಲಿ ಕಾಂಪೌಂಡರ್ ಔಷಧಗಳ ಬೀರುವಿನ ಮುಂದೆ ನಿಂತಿದ್ದಾರೆ. ಹದಿನೈದು ದಿನಗಳ ಹಿಂದೆ ಶವ ಪರೀಕ್ಷೆಯ ಸಂದರ್ಭದಲ್ಲಿ ಎರಡು ಸಾವಿರ ರೂಗಳನ್ನು ಲಂಚವಾಗಿ ನೀಡಿದ್ದ ಬೋರಣ್ಣನವರು ಕೈಯಲ್ಲಿ ಅರ್ಜಿಯೊಂದನ್ನು ಹಿಡಿದುಕೊಂಡು ವೈದ್ಯರ ಬಳಿಗೆ ಬರುತ್ತಾರೆ]

ಬೋರಣ್ಣ : ನಮಸ್ಕಾರ ಸ್ವಾಮಿ.

ಡಾಕ್ಟರ್ : [ಬೋರಣ್ಣನವರ ಕಡೆ ನೋಡುತ್ತಾ]
ಹೂ.... ಏನ್ ಬಂದ್ರಿ?

ಬೋರಣ್ಣ : ತಮ್ಮನ್ನೇ ನೋಡ್ಕೊಂಡು ಹೋಗೋಣ ಅಂತ ಬಂದೆ.

ಡಾಕ್ಟರ್ : ಯಾಕೆ... ಕಳೆದ ವಾರವೇ ರಿಪೋರ್ಟ್ ಕೊಟ್ಟನಲ್ಲ, ಇನ್ನೇನು ಬೇಕಾಗಿತ್ತು?

ಬೋರಣ್ಣ : ನಿಮ್ತಾವೆ ಒಸಿ ಕೆಲ್ಸ ಇತ್ತು ಸ್ವಾಮಿ.

ಡಾಕ್ಟರ್ : ಇನ್ನೇನ್ ಕೆಲ್ಸ?

ಬೋರಣ್ಣ : ಈ ಅರ್ಜಿನಾ ನಿಮ್ಗೆ ಕೊಡೋಕೆ ಅಂತ ಬಂದೆ ಸ್ವಾಮಿ.

ಡಾಕ್ಟರ್ : ಯಾವ ಅರ್ಜಿ?.....ಯಾತಕ್ಕೆ ಅರ್ಜಿ?

ಬೋರಣ್ಣ : ತಕೊಳಿ ಸ್ವಾಮಿ ನೀವೇ ಓದಿ.

ಡಾಕ್ಟರ್ : ಅದೇನು ವಿಷಯ ಬಾಯಲ್ಲೆ ಹೇಳ್ರಿ. ತಾಲ್ಲೂಕು ಕಛೇರಿಗೆ ಅರ್ಜಿ ಕೊಟ್ಟಂಗೆ ನನಗ್ಯಾಕ್ರಿ ಕೊಡ್ತೀರಿ?

ಬೋರಣ್ಣ : ಬಾಯಲ್ಲಿ ಹೇಳುವಂಥಾದ್ದಲ್ಲ ಸ್ವಾಮಿ.

ಡಾಕ್ಟರ್ : ಹಂಗಂದ್ರೆ?

ಬೋರಣ್ಣ : ನೀವೇ ಓದಿ ನೋಡ್ಬೇಕು ಸ್ವಾಮಿ.

ಡಾಕ್ಟರ್ : ನನಗೆ ಮಾಡೂಕೆ ಏನು ಕೆಲಸವಿಲ್ಲ ಅಂತ ತಿಳ್ಕೊಂಡಿದ್ದೀರಾ?

ಬೋರಣ್ಣ : ದಯವಿಟ್ಟು, ಇದನ್ನು ತಾವು ಈಸ್ಕೋಬೇಕು ಸ್ವಾಮಿ.

ಡಾಕ್ಟರ್ : [ತಾತ್ಸಾರದಿಂದ]
ಕೊಡ್ರಿ ಇಲ್ಲಿ.

(ಬೋರಣ್ಣನಿಂದ ಅರ್ಜಿಯನ್ನು ಪಡೆದು, ಸಮೀಪದಲ್ಲೇ ನಿಂತಿದ್ದ ಕಾಂಪೌಂಡರ್ ಕೈಗೆ ಕೊಡುತ್ತ)
ಅದೇನು ಬರೆದಿದೆ ಅಂತೆ ಗಟ್ಟಿಯಾಗಿ ಓದ್ರಿ.

ಕಾಂಪೌಂಡರ್ : [ಅರ್ಜಿಯನ್ನು ಓದತೊಡಗುತ್ತಾನೆ]

ಇಂದ-
ಕೊಳ್ಳಿ ಬೋರಣ್ಣ,
ಬಿನ್ ಮೂಲೆಮನೆ ರಾಮೇಗೌಡ,
ಏರಿಮೇಗಳ ದೊಡ್ಡಿ,
ಗುದ್ದೂರು ತಾಲ್ಲೂಕು .

ಗೆ-
ವೈದ್ಯಾಧಿಕಾರಿಗಳು,
ಸರ್ಕಾರಿ ಆಸ್ಪತ್ರೆ,
ಗುದ್ದೂರು ಟೌನ್.

ಮಾನ್ಯರೇ,

ವಿಷಯ : ಹದಿನೈದು ದಿನಗಳ ಹಿಂದೆ ನಮ್ಮ ಅಣ್ಣನ ಮಗನ ಶವ ಪರೀಕ್ಷೆಯ ಸಂದರ್ಭದಲ್ಲಿ ತಮಗೆ ಕೊಟ್ಟಿದ್ದ ರೂಪಾಯಿ 2000/- (ರೂ. ಎರಡು ಸಾವಿರ ಮಾತ್ರ) ಲಂಚದ ಹಣವನ್ನು ತಮ್ಮಿಂದ ವಾಪಸ್ಸು ಪಡೆಯುವುದು....

[ಅರ್ಜಿಯಲ್ಲಿನ ವಿಷಯವನ್ನು ಕೇಳುತ್ತಿದ್ದಂತೆಯೇ ತೀವ್ರವಾದ ಕೋಪೋದ್ರೇಕಕ್ಕೆ ಡಾಕ್ಟರು ಒಳಗಾಗುತ್ತಾರೆ]

ಡಾಕ್ಟರ್ : ಏ.... ಏನಯ್ಯಾ ಇದು? ನೀನೇನು ಬರ್ಕೊಂಡು ಬಂದಿರೋದು?

ಬೋರಣ್ಣ : ಸ್ವಲ್ಪ ಸಮಾಧಾನ ಮಾಡ್ಕೊಳಿ ಸ್ವಾಮಿ, ಅರ್ಜಿಯಲ್ಲಿ ಬರೆದಿರುವುದನ್ನು ಪೂರ್ತ ಕೇಳಿ. ಆಮೇಲೆ ರೇಗೂರಂತೆ.

ಡಾಕ್ಟರ್ : ಆಮೇಲೆ ಏನು ರೇಗೂದು? ಈಡಿಯಟ್ ತಂದು.

[ಓದುವುದನ್ನು ನಿಲ್ಲಿಸಿದ್ದ ಕಾಂಪೌಂಡರ್ ಕಡೆಗೆ ತಿರುಗಿ]
ಓದಯ್ಯ ಅದೇನು?

ಕಾಂಪೌಂಡರ್: [ಅರ್ಜಿಯಲ್ಲಿದ್ದ ಒಕ್ಕಣೆಯನ್ನು ಓದತೊಡಗುತ್ತಾನೆ]
ಕಳೆದ ವಾರ ರಸ್ತೆ ಅಪಘಾತದಲ್ಲಿ ನಮ್ಮ ಅಣ್ಣನವರ ಮಗ ಮರಣ ಹೊಂದಿದಾಗ, ಶವ ಪರೀಕ್ಷೆಗೆಂದು ಹೆಣವನ್ನು ಪೋಲಿಸರು ಗುದ್ದೂರಿನ ಸರ್ಕಾರಿ ಆಸ್ಪತ್ರೆಗೆ ತಂದು ಹಾಕಿದ್ದುದು ಸರಿಯಷ್ಟೆ. ಶವ ಪರೀಕ್ಷೆಯನ್ನು ಮಾಡಿ, ರಿಪೋರ್ಟ್ ಕೊಡುವುದಕ್ಕೆ ಎರಡು ಸಾವಿರ ರೂಗಳನ್ನು ಕೊಡಲೇಬೇಕೆಂದು ವೈದ್ಯಾಧಿಕಾರಿಗಳಾದ ತಾವು ಅಂದು ನಮ್ಮನ್ನು ಒತ್ತಾಯ ಮಾಡಿದಿರಿ. ಅಂದಿನ ಸಂದರ್ಭದ ಇಕ್ಕಟ್ಟಿಗೆ ಒಳಗಾಗಿ, ಅನ್ಯಮಾರ್ಗವಿಲ್ಲದೆ, ನಾನು ಸಾಲ ಸೋಲ ಮಾಡಿ, ಎರಡು ಸಾವಿರ ರೂಗಳನ್ನು ತಮಗೆ ನೀಡಿದೆನು. ಲಂಚ ನಿರ್ಮೂಲನ ಕಾಯಿದೆ ಪ್ರಕಾರ ಸರ್ಕಾರಿ ನೌಕರರಾದ ನೀವು, ಸಾರ್ವಜನಿಕ ಸೇವೆಯ ಸಂದರ್ಭದಲ್ಲಿ ಲಂಚವನ್ನು ಪಡೆದಿರುವುದು ಗುರುತರವಾದ ಅಪರಾಧವಾಗಿದೆ. ಆದ್ದರಿಂದ ನೀವು ಮಾಡಿರುವ ಅಪರಾಧವನ್ನು ಅರಿತುಕೊಂಡು, ನಾನು ನಿಮಗೆ ನೀಡಿರುವ ಎರಡು ಸಾವಿರ ರೂಗಳನ್ನು ಈ ಕೂಡಲೇ ನನಗೆ ಹಿಂತಿರುಗಿಸುವುದು. ಒಂದು ವೇಳೆ ನೀವು ಹಣವನ್ನು ಹಿಂತಿರುಗಿಸಲು ನಿರಾಕರಿಸಿದರೆ, ನನ್ನಿಂದ ನೀವು ತೆಗೆದುಕೊಂಡಿರುವ ಲಂಚದ ವಿಷಯವನ್ನು ನಿಮ್ಮ ಮೇಲಿನವರಾದ ಜಿಲ್ಲಾ ವೈದ್ಯಾಧಿಕಾರಿಗಳಿಗೂ, ಆರೋಗ್ಯ ಮಂತ್ರಿಗಳಿಗೂ ಮತ್ತು ಮುಖ್ಯಮಂತ್ರಿಗಳಿಗೂ ಲಿಖಿತ ರೂಪದಲ್ಲಿ ತಿಳಿಸಲಾಗುತ್ತದೆ. ಎಲ್ಲವನ್ನೂ ಚೆನ್ನಾಗಿ ತಿಳಿದಿರುವ ತಾವು ಕಾನೂನು ರೀತ್ಯ

ಮುಂದಿನ ಕ್ರಮಗಳಿಗೆ ಅವಕಾಶ ನೀಡದೆ, ಈ ಕೂಡಲೇ ಎರಡು ಸಾವಿರ ರೂಪಾಯಿ ಲಂಚದ ಹಣವನ್ನು ಹಿಂತಿರುಗಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಇಂತು,

ನಮಸ್ಕಾರಗಳು

ಕೊಳ್ಳಿ ಬೋರಣ್ಣ

ಡಾಕ್ಟರ್ : ಏನೋ, ತಲೆಗಿಲೆ ನೆಟ್ಟಗಿದೆ ತಾನೆ ನಿಂಗೆ?

ಬೋರಣ್ಣ : ಸ್ವಾಮಿ, ಹಂಗೆಲ್ಲಾ ಬಾಯ್ಗೆ ಬಂದಂಗೆ ಹಗುರವಾಗಿ ಮಾತಾಡ್ಬೇಡಿ.

ಡಾಕ್ಟರ್ : ನಿನ್ ಜೊತೇಲಿ ಮರ್ಯಾದೆಯಾಗಿ ಬೇರೆ ಮಾತಾಡ್ಬೇಕೆ? ಆವತ್ತು ಚೆನ್ನಾಗಿತ್ತೇನೊ, ಶವಪರೀಕ್ಷೆ ಮಾಡಿಸ್ಕೊಂಡು ರಿಪೋರ್ಟ್ ಈಸ್ಕೊಳುವಾಗ?

ಬೋರಣ್ಣ : ರಿಪೋರ್ಟ್ ಕೊಡೂದು ನಿಮ್ಮ ಕರ್ತವ್ಯ ಅಲ್ವೆ ಸ್ವಾಮಿ?

ಡಾಕ್ಟರ್ : ಅವತ್ತೆ ಬೊಗಳ್ಬೇಕಾಗಿತ್ತು ಈ ಮಾತ?

ಬೋರಣ್ಣ : ಸ್ವಾಮಿ, ಆವತ್ತು ನಮಗೆ ಬಂದಿದ್ದ ಸಂಕಟದಲ್ಲಿ, ನಿಮ್ಜೊತೆ ಜಗಳ ಬೋರ ಆಡ್ಕೊಂಡು ನಿಂತ್ಕೊಳೂಕೆ ಆಯ್ತಿತ್ತೆ? ನೀವೇ ಹೇಳಿ?

ಡಾಕ್ಟರ್ : ಇವತ್ತು ನಿಂಗೆ ಸಂಕಟಯಿಲ್ಲ. ಅದಕ್ಕೆ ಈ ವರ್ಸೆ ತಕೊಂಡು ಬಂದಿದ್ದೀಯ?
[ಈ ವಾಗ್ವಾದ ನಡೆಯುತ್ತಿರುವಾಗ, ಜವರಯ್ಯ ಎಂಬುವನು ಅರ್ಜಿಯೊಂದನ್ನು ಹಿಡಿದುಕೊಂಡು ವೈದ್ಯರ ಬಳಿಗೆ ಬರುತ್ತಾನೆ.]

ಕಾಂಪೌಂಡರ್ : ನಿಂದೇನಯ್ಯ ಸಮಾಚಾರ?

ಜವರಯ್ಯ : ಡಾಕ್ಟರ್ಗೆ ಅರ್ಜಿ ಕೊಡೂಕೆ ಬಂದಿದ್ದೀನಿ ಸ್ವಾಮಿ.

ಡಾಕ್ಟರ್ : ಯಾರೋ ನೀನು?

ಜವರಯ್ಯ : ಆಗ್ಲೆ ಮರೆತ್ಬುಟ್ರಿ? ಹೋದ್ನೆ ತಿಂಗ್ಳು, ನನ್ನ ಮಗನ್ನ ಇಲ್ಲೇ ಇಲಾಜು ಮಾಡಿಸಿಲಿಲ್ಲವೇ ಸ್ವಾಮಿ? ದೊಡ್ಡ ಜ್ವರ ಬಂದ್ಬುಟ್ಟು, ನಿಮ್ಮ ಆಸ್ಪತ್ರೆಗೆ ಸೇರಿಸಿದ್ನಲ್ಲ!

ಡಾಕ್ಟರ್ : ಹೂ.... ಏನು ಈಗ?

ಜವರಯ್ಯ : ನಿಮಗೊಂದು ಅರ್ಜಿ ಬರ್ಸ್ಕೊಂಡು ಬಂದಿದ್ದೆ, ತಕೊಳಿ ಸ್ವಾಮಿ.

ಡಾಕ್ಟರ್ : ಏನಿದೆ ಅರ್ಜೀಲಿ?

ಜವರಯ್ಯ : ನಿಮ್ಗೇನು ಅಕ್ಷರ ಬರೂದಿಲ್ವೆ ಸ್ವಾಮಿ? ತಕೊಳಿ ಓದಿ.

ಕಾಂಪೌಂಡರ್ : ಏ.... ಏನಯ್ಯ ಹಿಂಗೆಲ್ಲಾ ತೂರ್ಸಿ ಮಾತಾಡ್ತೀಯ?

ಜವರಯ್ಯ : ನಾನೇನು ಅಂಥಾ ತಪ್ಪು ಮಾತಾಡ್ದೆ? ಅಕ್ಷರ ಕಾಣ್ರ, ಓದಿ ಅಂದೆ. ಅದೇ ತಪ್ಪೇ?

ಕಾಂಪೌಂಡರ್ : ಥೂ... ಎಂಥಾ ಒರಟು ಜನ ಸಾರ್, ಇವರು!

ಡಾಕ್ಟರ್ : ಈಸ್ಕೊಂಡು ಅದೇನು ಓದಯ್ಯ?

ಕಾಂಪೌಂಡರ್ : ಕೊಡಯ್ಯ ಇಲ್ಲಿ.
[ಜವರಯ್ಯನಿಂದ ಅರ್ಜಿಯನ್ನು ಪಡೆದು ಗಟ್ಟಿಯಾಗಿ ಓದತೊಡಗುತ್ತಾನೆ]

ಇಂದ-
ಕತ್ತೆ ಜವರಯ್ಯ
ಬಿನ್ ಬುಕ್ಲು ತಮ್ಮಯ್ಯ
ಸೀಗೇಹಳ್ಳಿ
ಗುದ್ದೂರು ತಾಲ್ಲೂಕು.

ಗೆ-
ವೈದ್ಯಾಧಿಕಾರಿಗಳು,
ಸರ್ಕಾರಿ ಆಸ್ಪತ್ರೆ,
ಗುದ್ದೂರು.

ಮಾನ್ಯರೇ,

ವಿಷಯ : ಕಳೆದ ತಿಂಗಳು ನನ್ನ ಮಗನಿಗೆ ತಾವು ಔಷಧೋಪಚಾರ ಮಾಡುವಾಗ, ತಮಗೆ ನೀಡಿದ್ದ ಏಳುನೂರು ರೂಪಾಯಿ ಲಂಚದ ಹಣವನ್ನು ಹಿಂದಕ್ಕೆ ಪಡೆಯುವುದು.

ಡಾಕ್ಟರ್ : ಏ.... ಯಾವಾಗ ಕೊಟ್ಟಿದ್ದೊ ನೀನು?

ಜವರಯ್ಯ : ಇದೇನ್ ಸ್ವಾಮಿ, ಹಿಂಗೆ ಕೇಳ್ತೀರಿ? ಈಸ್ಕೊಂಡೋರು ನೀವು ಮರೆತ್ಬುಟ್ರು, ಕೊಟ್ಟೋನು ನಾನು ಮರಿಯೂಕಾದದ?

ಡಾಕ್ಟರ್ : [ಕಾಂಪೌಂಡರಿಗೆ]
ಅದೇನು ಬೇಗ ಬೇಗ ಓದಿ ಮುಗಿಸಯ್ಯ.

ಕಾಂಪೌಂಡರ್ : [ಅರ್ಜಿಯ ಓದನ್ನು ಮುಂದುವರಿಸುತ್ತಾನೆ]
ಕಳೆದ ತಿಂಗಳು ನನ್ನ ಮಗನಿಗೆ ದೊಡ್ಡ ಜ್ವರ ಬಂದು, ಅರೆ ಪ್ರಜ್ಞಾವಸ್ಥೆಯಲ್ಲಿದ್ದಾಗ, ಗುದ್ದೂರಿನ ಸರ್ಕಾರಿ ಆಸ್ಪತ್ರೆಗೆ ಸೇರಿಸಲೆಂದು ಕರೆತಂದೆನು. ಆಗ ತಾವು "ಯಾವುದೇ ಬೆಡ್ ಖಾಲಿಯಿಲ್ಲ: ಆಸ್ಪತ್ರೆಗೆ ಸೇರಿಸಿಕೊಳ್ಳಲಾಗುವುದಿಲ್ಲ" ವೆಂದು ನಿರಾಕರಿಸಿದಿರಿ. ಮತ್ತೆ ಮತ್ತೆ ನಾನು ಬೇಡಿಕೊಂಡರೂ, "ಕಡ್ಡಾಯವಾಗಿ ಆಗುವುದಿಲ್ಲ"ವೆಂದು ನೀವು ಒಳಕ್ಕೆ ಹೊರಟುಹೋದಿರಿ. ಆಮೇಲೆ ನಿಮ್ಮ ಆಸ್ಪತ್ರೆಯ ಒಬ್ಬ ಜವಾನ "ನೀವು ದುಡ್ನೋರು" ಅಂತ ಹೇಳಿದ. "ನಿಮಗೆ ಇನ್ನೂರು ಕೊಟ್ಟರೆ, ಬೆಡ್ ಸಿಗುತ್ತದೆ" ಎಂದ. ಅನಂತರ ನಿಮ್ಮ ಹಸ್ತ ನಾನೇ ಖುದ್ದಾಗಿ ಮೊದಲು ಇನ್ನೂರು ರೂಪಾಯಿಗಳನ್ನು ಕೊಟ್ಟೆನು. ತಕ್ಷಣ ನೀವು ನನ್ನ ಮಗನನ್ನು ಆಸ್ಪತ್ರೆಗೆ ಸೇರಿಸಿಕೊಂಡು, ಔಷಧೋಪಚಾರಗಳನ್ನು ಪ್ರಾರಂಭಿಸಿದಿರಿ, ನಾಲ್ಕು ದಿನಗಳ ನಂತರ ಮತ್ತೆ ನನ್ನಿಂದ ಐವತ್ತು ಕೆ.ಜಿ. ಸಣ್ಣಕ್ಕಿಯನ್ನು ತರಿಸಿಕೊಂಡಿರಿ. ಅಕ್ಕಿಯ ಬಾಬ್ತು ಐನೂರು ರೂಪಾಯಿಗಳನ್ನು ನೀವು ಇದುವರೆಗೂ ಕೊಟ್ಟಿಲ್ಲ. ಒಟ್ಟು ಏಳು ನೂರು ರೂಪಾಯಿಗಳು ನನ್ನ ಕಡೆಯಿಂದ ನಿಮಗೆ ಸೇರಿದೆ. ಲಂಚ ನಿರ್ಮೂಲನ ಕಾಯಿದೆ ಪ್ರಕಾರ ಸರ್ಕಾರಿ ನೌಕರರಾದ ನೀವು ಸಾರ್ವಜನಿಕ ಸೇವೆಯ ಸಂದರ್ಭದಲ್ಲಿ....

ಡಾಕ್ಟರ್ : [ಕಾಂಪೌಂಡರ್ನನ್ನು ಕುರಿತು]
ನಿಲ್ಸಯ್ಯ ಸಾಕು.

[ಜವರಯ್ಯನನ್ನು ಕುರಿತು)
ಈ ಅರ್ಜಿಯನ್ನು ನೀನೇ ಬರ್ಕೊಂಡು ಬಂದೇನಯ್ಯ?

ಕಾಂಪೌಂಡರ್ : [ತನ್ನ ಕೈಯಲ್ಲಿದ್ದ ಎರಡು ಅರ್ಜಿಗಳನ್ನು ಡಾಕ್ಟರ ಮುಂದೆ ಇಡುತ್ತಾ....]
ಇಲ್ನೋಡಿ ಸಾರ್, ಈ ಎರಡು ಅರ್ಜಿಗಳ ಕೈಬರಹ ಒಂದೇ ರೀತಿ ಇದೆ. ಕೊನೆ ಭಾಗದಲ್ಲಿ ಎಚ್ಚರಿಕೆ ಕೊಡುವ ಒಕ್ಕಣೆನೂ ಒಂದೇ ತರ ಅದೆ. ಇದರ ಹಿಂದೆ ಯಾರ್ದೊ ಕೈವಾಡ ಇದೆ ಸಾರ್.

ಡಾಕ್ಟರ್ : ಏ.... ಯಾರಯ್ಯ ಇದನ್ನ ಬರ್ಕೊಟ್ಟೋರು?

ಜವರಯ್ಯ : ಯಾರು, ಯಾಕೆ ಬರ್ಕೊಟ್ಟರು? ನಾನೇ ಬರ್ಕೊಂಡು ಬಂದೆ ಸ್ವಾಮಿ.

ಕಾಂಪೌಂಡರ್ : ಓ ಹೋ ಹೋ.... ಇವನೇ ಬರ್ಕೊಂಡು ಬಂದ್ಬುಟ್ಟವ್ನೆ! ಹಂಗಾದ್ರೆ 'ಲಂಚ ನಿರ್ಮೂಲನ ಕಾಯಿದೆ' ಅಂದ್ರೆ ಏನು ಹೇಳು ನೋಡೋಣ?
[ಅಷ್ಟರಲ್ಲಿ ಇನ್ನಿಬ್ಬರು ಅರ್ಜಿಗಳನ್ನು ಹಿಡಿದುಕೊಂಡು ಡಾಕ್ಟರ ಬಳಿಗೆ ಬರುತ್ತಾರೆ]

ಡಾಕ್ಟರ್ : ಯಾರ್ರಿ ನೀವು?

ಇಬ್ಬರು : ನಿಮಗೆ ಈ ಅರ್ಜಿ ಕೊಡ್ಮ ಅಂತ ಬಂದಿದ್ದೀವಿ ಸಾರ್.

ಕಾಂಪೌಂಡರ್ : ಹಣವನ್ನು ಹಿಂದಕ್ಕೆ ಕೇಳು ಅರ್ಜಿ ತಾನೆ?

ವ್ಯಕ್ತಿ-1 : ಅರ್ಜೀನಾ ಓದದೆ ನಿಮಗೆ ಹೆಂಗೆ ಗೊತ್ತಾಗೊಯ್ತು ಸ್ವಾಮಿ?
[ಅವರಿಬ್ಬರಿಂದ ಅರ್ಜಿಗಳನ್ನು ಡಾಕ್ಟರ್ ಪಡೆದು, ಅವುಗಳನ್ನು ತಾವೇ ಓದಿದ ನಂತರ....]

ಡಾಕ್ಟರ್ : ಯಾಕೆ ಇಂಥಾ ನಾಟಕ ಆಡ್ತಾ ಇದ್ದೀರಾ? ಇದನ್ನೆಲ್ಲಾ ಯಾರು ಬರ್ಕೊಟ್ಟು, ನನ್ನ ಹತ್ರಕ್ಕೆ ಕಳಿಸ್ತಾವ್ರೆ ಹೇಳಿ?

[ಡಾಕ್ಟರ್ ಮಾತನ್ನು ಮುಗಿಸುತ್ತಿದ್ದಂತೆಯೇ, ರಾಜಣ್ಣ ಮತ್ತು ಮೇಷ್ಟ್ರು ಅಲ್ಲಿಗೆ ಬರುತ್ತಾರೆ]

ರಾಜಣ್ಣ : ನಾವೇ ಡಾಕ್ಟರೇ, ನಿಮ್ಮ ಹತ್ರ ಅವರ್ನೆಲ್ಲಾ ಕಳ್ಸಿದ್ದು.

ಡಾಕ್ಟರ್ : ಯಾರ್ರಿ ನೀವು? ನಿಮ್ಮ ಹೆಸರೇನು?

ರಾಜಣ್ಣ : ನಾನು ಈ ಊರಿನ ನಾಗರಿಕ ಸಮಿತಿಯ ಅಧ್ಯಕ್ಷ. ರಾಜಣ್ಣ ಅಂತ ನನ್ನ ಹೆಸರು.

ಡಾಕ್ಟರ್ : [ಮೇಷ್ಟರ ಕಡೆಗೆ ನೋಡುತ್ತ]
ನೀವು ?

ಮೇಷ್ಟ್ರು : ಈ ಊರಿನ ಹೈಸ್ಕೂಲಿನಲ್ಲಿ ಟೀಚರ್. ನರಸಿಂಹಯ್ಯ ಅಂತ ನನ್ನ ಹೆಸರು.

ಕಾಂಪೌಂಡರ್ : ಹೈಕ್ಳಗೇನು ಪಾಠ ಮಾಡ್ತಿರೋ, ಇಲ್ಲ.... ಇಂಥಾ ತರ್ಲೆ ಅರ್ಜಿಗಳ ಬರಿಸ್ಕೊಂಡು ಕಾಲ ನೂಕ್ತಾ ಇದ್ದೀರೋ?

ರಾಜಣ್ಣ : ರ್‍ರೀ.... ನೀವೊಬ್ರು ಸಾರ್ವಜನಿಕ ನೌಕರ. ಸಾರ್ವಜನಿಕರ ಜೊತೆ ಹೇಗೆ ಮರ್ಯಾದೆಯಿಂದ ಮಾತಾಡ್ಬೇಕು ಅನ್ನೋದು ಗೊತ್ತಿಲ್ವ ನಿಮಗೆ?

ಕಾಂಪೌಂಡರ್ : ನಾನೇನು ಅಂಥಾ ತಪ್ಪು ಮಾತಾಡ್ದೆ ಸಾರ್?

ರಾಜಣ್ಣ : ತರ್ಲೆ ಅರ್ಜಿ ಅಂತ ಹೇಳ್ತಾ ಇದ್ದೀರಿ! ತರ್ಲೆ ಅರ್ಜೀನಾ ಇವು?

ಡಾಕ್ಟರ್ : ಇನ್ನೇನು ಇವು ನ್ಯಾಯವಾದ ಅರ್ಜಿಗಳ?

ರಾಜಣ್ಣ : ಅಲ್ವೆ ಡಾಕ್ಟರೇ?

ಡಾಕ್ಟರ್ : ಅವತ್ತು ಇವರೆಲ್ಲಾ ನನ್ನಿಂದ ಉಪಕಾರ ಪಡೆಯುವಾಗ ಚೆನ್ನಾಗಿತ್ತು. ಇವತ್ತು ಅನ್ಯಾಯ ಆಗೋಯ್ತು ?

ರಾಜಣ್ಣ : ನಿಮ್ಮಿಂದ ಉಪಕಾರನಾ? ಏನ್ ಡಾಕ್ಟರೇ, ಹಿಂಗಂತೀರಿ! ಸಾರ್ವಜನಿಕರ ದುಡ್ಡಿನಿಂದ ಸರ್ಕಾರ ಆಸ್ಪತ್ರೆ ಕಟ್ಟಡ ಕಟ್ಟಿಸಿದೆ. ನಿಮಗೆಲ್ಲಾ ಸಂಬಳ ಕೊಡ್ತಾಯಿದೆ. ಇಲ್ಲಿಗೆ ಬರುವ ಸಾರ್ವಜನಿಕರ ಕೆಲಸ ಮಾಡೋದು ನಿಮ್ಮ ಕರ್ತವ್ಯ ಅಲ್ಲವೇ? ಅದನ್ನ ನಿಮ್ಮಿಂದ ಆಯ್ತಿರೊ ಉಪಕಾರ ಅಂತ ಭಾವಿಸ್ತೀರಾ?

ಡಾಕ್ಟರ್ : ಉಪಕಾರ ಅಲ್ದೇದ್ರೆ, ಅಪಕಾರ ಅಂತಾನೆ ತಿಳ್ಕೊಳಿ. ಈಗ ನಾನೇನು ಮಾಡ್ಬೇಕು ಹೇಳಿ?

ರಾಜಣ್ಣ : ಇವರಿಂದ ಪಡೆದಿರುವ ಲಂಚದ ಹಣವನ್ನು ಈಗ ನೀವು ಇವರಿಗೆ ವಾಪಸ್ಸು ಕೊಡಬೇಕು.

ಡಾಕ್ಟರ್ : ಅದನ್ನ ಕೇಳೋಕೆ ನೀವು ಯಾರು?

ರಾಜಣ್ಣ : ಮೊದ್ಲೆ ಹೇಳಿಲ್ವ? ನಾನು ಈ ಊರಿನ ನಾಗರಿಕ ಸಮಿತಿ ಅಧ್ಯಕ್ಷ ಅಂತ. ನಮ್ಮೂರಿನ ಯಾವುದೇ ಸರ್ಕಾರಿ ಕಚೇರಿಗಳಲ್ಲಿ, ಯಾವುದೇ ನೌಕರರಾಗಲಿ ಮಾಡುವ ಭ್ರಷ್ಟಾಚಾರದ ವಿರುದ್ಧ ಹೋರಾಡುವುದೇ ನಮ್ಮ ಸಮಿತಿಯ ಗುರಿ.

ಮೇಷ್ಟ್ರು : ಡಾಕ್ಟರೇ, ನೀವು ಲಂಚ ತಕೊಂಡು ಕೆಲಸ ಮಾಡ್ತ ಇರೋದು ತಪ್ಪು ಅಂತ ನಿಮಗನಿಸಲ್ವೆ?

ಡಾಕ್ಟರ್ : ಯಾಕ್ರಿ ತಪ್ಪು ಅಂತ ಅನ್ಸುತ್ತೆ? ಸರ್ಕಾರಿ ಕೆಲಸ ತಕೊಳ್ವಾಗ ಲಂಚ ಕೊಟ್ಟಿದ್ದೀನಿ. ಈ ಊರಿಗೆ ಟ್ರಾನ್ಸ್‌ಪರ್ ಮಾಡಿಸಿಕೊಳ್ಳುವಾಗ ಲಂಚ ಕೊಟ್ಟಿದ್ದೀನಿ. ಎಲ್ಲಾ ಕಡೆ ಹೆಜ್ಜೆ ಹೆಜ್ಜೆಗೂ ಲಕ್ಷಾಂತರ ರೂಪಾಯಿ ಸುರಿದಿರೊ ನಾನು, ಅಷ್ಟನ್ನ ಅದೇ ರೀತಿ ಸಂಪಾದ್ನೆ ಮಾಡುದ್ರೆ ತಪ್ಪೇನ್ರಿ?

ಮೇಷ್ಟ್ರು : ಲಂಚ ತಕೊ ವ್ಯಕ್ತಿಗಳೆಲ್ಲಾ ನಿಮ್ಮ ತರಾನೆ ಬೇರೆಯವರ ಕಡೆ ಕೈ ತೋರಿಸ್ತಾ ಬಂದ್ರೆ, ಇದನ್ನ ತಡೆಗಟ್ಟೋದು ಹೇಗೆ ಡಾಕ್ಟರೆ?

ಡಾಕ್ಟರ್ : ಅದಕ್ಕೆ ನನ್ನನ್ನ ಏನ್ ಕೇಳ್ತೀರಿ?

ರಾಜಣ್ಣ : ಇನ್ನು ಯಾರನ್ನು ಕೇಳೂದು? ಲಂಚದ ಹಣ ತಿಂದು ಅರ್ಗಿಸ್ಕೊಳ್ಳೋಕೆ ಇಪ್ಪತ್ತೆಂಟು ಸಬೂಬು ಹೇಳುವ ನಿಮಗೆ, ನಿಮ್ಮ ಕಣ್ಮುಂದೆ ಒಂದು ಸಮಾಜ ಇದೆ.... ಆ ಸಮಾಜದಲ್ಲಿ ಸಾವಿರಾರು ಮಂದಿ ಜನ ಅವ್ರೆ.... ಆ ಜನಗಳಿಗೆ ಒಳ್ಳೇದು ಮಾಡ್ಬೇಕು ಅನ್ನು ಪ್ರಜ್ಞೆ ಇರಬೇಡವೇನ್ರಿ?

ಡಾಕ್ಟರ್ : ಸಮಾಜ ಕಟ್ಕೊಂಡು ನನಗೇನ್ರಿ ಆಗ್ಬೇಕು? ನಾನು ಚೆನ್ನಾಗಿ ಬದುಕುವುದು ನನಗೆ ಮುಖ್ಯ.

ಮೇಷ್ಟ್ರು : ಚೆನ್ನಾಗಿ ಬದುಕೂದು ಅಂದ್ರೆ, ಸಾವಿರಾರು ಮಂದೀನಾ ಗೋಳಾಡುವಂತೆ ಮಾಡಿ, ಅವರಿಂದ ಹಣ ಸುಲ್ದು ನಿಮ್ಮ ಮನೆ ದೊಡ್ಡದು ಮಾಡ್ಕೊಳುದು ಅಂತ ಅರ್ಥವೇ ಡಾಕ್ಟರೇ?

ರಾಜಣ್ಣ : ಡಾಕ್ಟರೇ, ನಿಮಗೆ ವಿದ್ಯೆ ಕೊಟ್ಟಿರೂದು ಈ ಸಮಾಜ.... ನಿಮಗೊಂದು ಸ್ಥಾನಮಾನ ಕೊಟ್ಟಿರೂದು ಈ ಸಮಾಜ.... ಯಾವ ಸಮಾಜ ನಿಮ್ಮ ವ್ಯಕ್ತಿತ್ವ

ರೂಪಿಸಿ, ನಿಮ್ಮ ಬಾಳಿಗೊಂದು ಬೆಳಕು ತೋರಿಸಿದೆಯೋ, ಅಂಥಾ ಸಮಾಜಕ್ಕೆ ಪ್ರತಿಯಾಗಿ ನೀವು ಮಾಡ್ತಾಯಿರೋದು ಇದೇ ಏನು?

ಮೇಷ್ಟ್ರು : ಡಾಕ್ಟರೆ, ತಿಂಗಳು ತಿಂಗಳು ತುಂಬುತ್ತಿದ್ದಂಗೆ ನೀವು, ನಾನು ನಮ್ಮಂಥ ಸರ್ಕಾರಿ ನೌಕರರು ಎಣಿಸ್ತೀವಲ್ಲ ಸಾವಿರಾರು ರೂಪಾಯಿ ಸಂಬಳದ ಹಣ, ಅದು ಮಾಟಮಂತ್ರದಿಂದ ಉದುರುತ್ತೆ ಅಂತ ತಿಳ್ಕೊಂಡಿದ್ದೀರಾ? ಕೋಟಿಗಟ್ಟಲೆ ಮಂದಿ ಶ್ರಮಜೀವಿಗಳ ದುಡಿಮೆಯ ಫಲವನ್ನು ನಾವು ಅನುಭವಿಸ್ತಾ, ಅವರಿಗೆ ಪ್ರತಿಯಾಗಿ ನಾವೇನು ಕೊಡ್ತಾಯಿದ್ದೀವಿ?

ಡಾಕ್ಟರ್ : ಸಾಕು ನಿಲ್ಲಿಸ್ರಿ ನಿಮ್ಮ ಭಾಷಣ. ನನಗೆ ಇವೆಲ್ಲಾ ಗೊತ್ತಿಲ್ಲ ಅಂತ ಹೇಳೂಕೆ ಬರ್ಬೇಡಿ. ನಿಮಗಿಂತ ಚೆನ್ನಾಗಿ ಗೊತ್ತಿದೆ. ಆದರೆ, ನಾನೊಬ್ಬ ಸರಿಹೋದ್ರೆ, ಸಮಾಜವೇ ಸರಿಹೋಗುತ್ತೆ ಅಂತ ತಿಳ್ಕೊಂಡಿದ್ದೀರಾ?

ಮೇಷ್ಟ್ರು : ಸಮಾಜ ಸರಿ ಹೋಗುತ್ತೊ.... ಬಿಡುತ್ತೊ! ಆದರೆ ಸಮಾಜಕ್ಕೆ ಕೇಡು ಮಾಡದೇ ಇರುವ, ಒಬ್ಬ ವ್ಯಕ್ತಿಯ ಸಂಖ್ಯೆ ಹೆಚ್ಚಾಗುವುದಿಲ್ಲವೇ?

ರಾಜಣ್ಣ : ಕೊಡ್ದೇದ್ರೆ ನಾವು ಬಿಡೊಲ್ಲ ಡಾಕ್ಟರೆ.

ಡಾಕ್ಟರ್ : ಏನ್ರಿ ಮಾಡ್ತೀರಾ?

ರಾಜಣ್ಣ : ಏನು ಮಾಡ್ತೀವಿ ಅನ್ನೋದನ್ನ ಅರ್ಜಿಯಲ್ಲೆ ಬರೆದಿದೆ. ಅದರಂತೆ ಮುಂದುವರಿತೀವಿ. ನಿಮ್ಮಿಂದ ವಸೂಲು ಮಾಡೋತನಕ ನಮ್ಮ ಪ್ರಯತ್ನ ಬಿಡೊಲ್ಲ.

ಮೇಷ್ಟ್ರು : ಡಾಕ್ಟರೆ, ಮತ್ತೊಮ್ಮೆ ಯೋಚ್ನೆ ಮಾಡಿ ನೋಡಿ. ಜೀವನದಲ್ಲಿ ನಾವು ಮಾಡಿದ ತಪ್ಪು ಗೊತ್ತಾದಾಗ, ತಪ್ಪನ್ನ ತಿದ್ದಿಕೊಳ್ಳೋದು ಉತ್ತಮ. ನಮ್ಮ ತಪ್ಪನ್ನೇ ಸಮರ್ಥಿಸಿಕೊಳ್ಳೋದು ಕೇಡಿಗೆ ಹೆದ್ದಾರಿಯಾಗುತ್ತೆ.

ರಾಜಣ್ಣ : ನಿಮ್ಮನ್ನ ನೋಡುದ್ರೆ ಇನ್ನು ಸರ್ವೀಸ್ ಬಹಳ ಇರೂವಂಗೆ ಕಾಣ್ಸುತ್ತೆ. ಅನ್ಯಾಯವಾಗಿ ಯಾಕೆ ನಿಮ್ಮ ತಲೆ ಮೇಲೆ ನೀವೇ ಕಲ್ ಹಾಕೊಳ್ತೀರ? ಮರ್ಯಾದೆಯಾಗಿ ದುಡ್ಡು ಕೊಡ್ಬುಡಿ.

ಡಾಕ್ಟರ್ : ಏನ್ರಿ ಮರ್ಯಾದೆ ಗಿರ್ಯಾದೆ ಅಂತ ಮಾತಾಡೂಕೆ ಶುರು ಮಾಡುದ್ರಿ.

ರಾಜಣ್ಣ : ಇನ್ನೇನ್ರಿ? ಆತ್ಮಗೌರವ ಅಂತ ಇದ್ದಿದ್ರೆ, ಹಿಂಗೆಲ್ಲಾ ಕಂಡೋರ ಎಂಜ್ಲುಗೆ ಕೈ ಹಾಕ್ತಿದ್ರಾ?

ಮೇಷ್ಟ್ರು : ರಾಜಣ್ಣ, ನೀವು ಹೀಗೆಲ್ಲಾ ದಾರಿ ಬಿಟ್ಟು ಮಾತಾಡ್ಬೇಡಿ. ನ್ಯಾಯವಾದ ರೀತಿಯಲ್ಲಿ ಸಮಾಧಾನವಾಗಿ ಕೇಳಿ. ಯಾರೂ ಉದ್ವೇಗ ಆಕ್ರೋಶ ಪಡೂದು ಬೇಡ. ಡಾಕ್ಟರೇ, ಸುಮ್ಮನೆ ಇದನ್ನ ಬೆಳಿಸ್ಕೊಂಡು ಹೋಗೂದು ಬೇಡಿ. ಇವರ ಹತ್ರ ಈಸ್ಕೊಂಡಿರೊ ದುಡ್ಡನ್ನೆಲ್ಲಾ ಹಿಂದಕ್ಕೆ ಕೊಟ್ಬುಡಿ.

[ಅಷ್ಟರಲ್ಲಿ ರಂಗದ ಒಳಭಾಗದಿಂದ ಧಿಕ್ಕಾರದ ಧ್ವನಿಗಳು ಕೇಳಿ ಬರತೊಡಗುತ್ತವೆ.]

ಧ್ವನಿ-1 : ಭ್ರಷ್ಟ ವೈದ್ಯಾಧಿಕಾರಿಗೆ....

ಎಲ್ಲರು : ಧಿಕ್ಕಾರ.

ಧ್ವನಿ-2 : ಹೆಣ ಕೂದು ಹಣ ತಿಂದಿರುವ ರಣ ಹದ್ದಿಗೆ....

ಎಲ್ಲರು : ಧಿಕ್ಕಾರ.

ಧ್ವನಿ-1 : ಜನತೆಗೆ ದ್ರೋಹ ಬಗೆದಿರುವ ಲಂಚಕೋರನಿಗೆ....

ಎಲ್ಲರು : ಧಿಕ್ಕಾರ.

ಧ್ವನಿ-2 : ಎಂಜಲು ಕಾಸಿಗೆ ಬಾಯ್ಬಿಡುವ ಸಮಾಜದ್ರೋಹಿಗೆ...

ಎಲ್ಲರು : ಧಿಕ್ಕಾರ....[ಈ ಧ್ವನಿಯನ್ನು ಕೇಳಿಸಿಕೊಳ್ಳುತ್ತಿದ್ದಂತೆಯೇ]

ಮೇಷ್ಟ್ರು : ರಾಜಣ್ಣ, ಏನದು ಗಲಾಟೆ?

ರಾಜಣ್ಣ : ಆ ಶಿವಲಿಂಗ.... ಚನ್ನೇಗೌಡ.... ಇಬ್ಬರೂ ಜನ ಕಟ್ಕೊಂಡು ಬತ್ತಾವ್ರೆ ಅಂತ ಕಾಣ್ತದೆ!

ಮೇಷ್ಟ್ರು : ನೀವು ಅವರನ್ನ ಇಲ್ಲಿಗೆ ಬರಹೇಳಿದ್ರ?

ರಾಜಣ್ಣ : ಬನ್ನಿ ಅಂತ ಕರೆದಿರಲಿಲ್ಲ. ನಾವು ಇಲ್ಲಿಗೆ ಬಂದ ವಿಷಯ ಗೊತ್ತಾಗಿ, ಬತ್ತಾವ್ರೆ ಅಂತ ಕಾಣ್ತದೆ.

[ಡಾಕ್ಟರ ಕಡೆ ತಿರುಗಿ]
ಡಾಕ್ಟರೇ, ಅವರೆಲ್ಲಾ ಒಳಕ್ಕೆ ನುಗ್ಗುದ್ರೆ, ಪರಿಸ್ಥಿತಿ ಕೈ ಮೀರಿ ಹೋಗುತ್ತೆ. ಅದಕ್ಕೆ ಅವಕಾಶ ಕೊಡ್ಬೇಡಿ.

[ಧಿಕ್ಕಾರದ ಧ್ವನಿಗಳು ಇನ್ನು ಹತ್ತಿರ ಹತ್ತಿರ ಕೇಳ ಬರತೊಡಗುತ್ತವೆ.]

ಧ್ವನಿ-1 : ಭ್ರಷ್ಟ ವೈದ್ಯಾಧಿಕಾರಿಗೆ....

ಎಲ್ಲರು : ಧಿಕ್ಕಾರ.

ಧ್ವನಿ-2 : ಹೆಣ ಕೂದು ಹಣ ತಿಂದಿರುವ ರಣ ಹದ್ದಿಗೆ...

ಎಲ್ಲರು : ಧಿಕ್ಕಾರ.
[ಆಕ್ರೋಶಪೂರ್ಣವಾದ ಧಿಕ್ಕಾರದ ಧ್ವನಿಯನ್ನು ಕೇಳುತ್ತಾ, ಕೇಳುತ್ತಾ ಡಾಕ್ಟರ್ ಭೀತಿಗೊಳಗಾಗುತ್ತಾರೆ. ಡಾಕ್ಟರ್ ಹತ್ತಿರಕ್ಕೆ ಕಾಂಪೌಂಡರ್ ಬಂದು ಮೆಲುಧ್ವನಿಯಲ್ಲಿ ಹೇಳತೊಡಗುತ್ತಾನೆ.]

ಕಾಂಪೌಂಡರ್ : ಕೊಡೂಕೆ ಒಪ್ಕೊಂಡುಬುಡಿ ಸಾರ್. ಏನಾದ್ರು ಅಪಾಯ ಆದ್ರೆ ಏನ್ ಗತಿ?
[ಕಾಂಪೌಂಡರ್ ಮಾತುಗಳು ಡಾಕ್ಟರ ಮನಸ್ಸಿನ ಮೇಲೆ ಪರಿಣಾಮ ಬೀರುತ್ತವೆ.]

ಡಾಕ್ಟರ್ : ಮೇಷ್ಟರೇ, ಇಲ್ಲಿ ಅರ್ಜಿ ಬರ್ಕೊಂಡು ಬಂದಿರುವ ಈ ನಾಲ್ಕು ಜನಕ್ಕೆ ತಾನೆ, ಈಗ ಹಣ ವಾಪಸ್ಸು ಕೊಡಬೇಕಾಗಿರೋದು?

ಮೇಷ್ಟ್ರು : ಹೌದು ಡಾಕ್ಟರೆ.

ಡಾಕ್ಟರ್ : ಆಗ್ಲಿ ಕೊಡ್ತೀನಿ.

ರಾಜಣ್ಣ : ಕೊಡ್ತೀನಿ ಅಂತ ಬರಿ ಬಾಯಲ್ಲಿ ಹೇಳ್ಬುಟ್ರೆ ಆಗೊಲ್ಲ. ಈಗ್ಲೆ ದುಡ್ಡನ್ನ ಮಡಗ್ಬೇಕು.

ಮೇಷ್ಟ್ರು : ಕೊಡ್ತರೆ, ಸುಮ್ನಿರಿ ರಾಜಣ್ಣ.

[ಧಿಕ್ಕಾರದ ಧ್ವನಿಗಳು ತುಂಬಾ ಹತ್ತಿರದಲ್ಲೇ ಕೇಳ ಬರತೊಡಗುತ್ತವೆ. ಭೀತಿಯಿಂದ ತತ್ತರಿಸತೊಡಗಿದ ಡಾಕ್ಟರ್, ಆತುರಾತುರವಾಗಿ ತಮ್ಮ ಮೇಜಿನ ಡ್ರಾಯರನ್ನು ಎಳೆದು, ಅಲ್ಲಿಂದ ಹಣವನ್ನು ತೆಗೆದುಕೊಂಡು, ನಂತರ ತಮ್ಮ ಜೇಬುಗಳಲ್ಲಿದ್ದ ಹಣವನ್ನು ಅದಕ್ಕೆ ಸೇರಿಸಿ, ಆದಷ್ಟು ಬೇಗ ಬೇಗ ಆ ನಾಲ್ಕು ಮಂದಿಯ ಕೈಗೆ ಅವರವರ ಪಾಲಿನ ಹಣವನ್ನು ಹಿಂತಿರುಗಿಸಿ, ತಮ್ಮ ಖುರ್ಚಿಯ ಬಳಿಗೆ ಬರುತ್ತಾರೆ. ಅಷ್ಟರಲ್ಲಿ ಶಿವಲಿಂಗ, ಚನ್ನೇಗೌಡ ಮತ್ತು ಇತರ ಹತ್ತಾರು ಮಂದಿ ಒಳಕ್ಕೆ ನುಗ್ಗಿ ಬರುತ್ತಾರೆ.]

ಶಿವಲಿಂಗ : ಏನಾಯ್ತು ರಾಜಣ್ಣಾವ್ರೆ? ದುಡ್ಡು ಕಕ್ಕೂಕೆ ಒಪ್ಕೊಂಡ್ನ?

ಚನ್ನೇಗೌಡ : ಕೊಡ್ತನಂತೊ.... ಇಲ್ವೋ ?

ರಾಜಣ್ಣ : ಕೊಟ್ಬಾಯ್ತು ಕಣ್ ಬನ್ರಯ್ಯ....

[ಶಿವಲಿಂಗ ಮತ್ತು ಚನ್ನೇಗೌಡನ ಆನಂದಕ್ಕೆ ಪಾರವೇ ಇಲ್ಲದಂತಾಗುತ್ತದೆ. ಭ್ರಷ್ಟಾಚಾರದ ವಿರುದ್ಧ ಜಯ ಪಡೆದ ಖುಷಿಯಲ್ಲಿ ಮತ್ತಷ್ಟು ಉತ್ಸಾಹದಿಂದ ತಮ್ಮ ಜೊತೆ ಬಂದಿದ್ದವರೊಡನೆ ರಂಗದ ಸುತ್ತ ಕುಣಿಯುತ್ತಾ, ಘೋಷಣೆಗಳನ್ನು ಕೂಗತೊಡಗುತ್ತಾರೆ]

ಶಿವಲಿಂಗ : ಭ್ರಷ್ಟಾಚಾರಕ್ಕೆ....

ಸಂಗಡಿಗರು : ಧಿಕ್ಕಾರ.

ಚನ್ನೇಗೌಡ : ಸಮಾಜ ದ್ರೋಹಿಗಳಿಗೆ....

ಸಂಗಡಿಗರು : ಧಿಕ್ಕಾರ

ಶಿವಲಿಂಗ : ಜನತೆಯ ಶತ್ರುಗಳಿಗೆ....

ಸಂಗಡಿಗರು : ಧಿಕ್ಕಾರ.

[ಅತ್ಯಂತ ಉತ್ಸಾಹದ ತುತ್ತತುದಿಯಲ್ಲಿ ಕುಣಿಯುತ್ತಾ, ಆರ್ಭಟಿಸುತ್ತಿದ್ದ ಅವರೆಲ್ಲರನ್ನು ಕುರಿತು ಮೇಷ್ಟ್ರು ಗದರಿಸುತ್ತಾರೆ]

ಮೇಷ್ಟ್ರು : ಸಾಕು, ಇನ್ನು ನಿಲ್ಸಿ. ಶಿವಲಿಂಗ, ಚನ್ನೇಗೌಡ ಸಾಕು ನಿಲ್ಸಿ.

[ರಂಗದ ಸುತ್ತ ಕೇಕೆ ಹಾಕುತ್ತಾ ಕುಣಿಯುತ್ತಿದ್ದವರು, ಈಗ ಸುಮ್ಮನಾಗಿ ರಂಗದ ಹಿಂಚೂಣಿಯಲ್ಲಿ ನಿಲ್ಲುತ್ತಾರೆ.]

ಮೇಷ್ಟ್ರು : ಶಿವಲಿಂಗ.... ಚನ್ನೇಗೌಡ ನೀವಿಬ್ರೂ ಇಲ್ಲಿ ಮುಂದಕ್ಕೆ ಬನ್ನಿ.... ರಾಜಣ್ಣ ನೀವು ಇವರ ಪಕ್ಕಕ್ಕೆ ಬನ್ನಿ.

[ರಂಗದ ಮಂಚೂಣಿಗೆ ಈ ಮೂವರೊಡನೆ ಮೇಷ್ಟ್ರು ಬಂದು ನಿಲ್ಲುತ್ತಾರೆ.]

ಮೇಷ್ಟ್ರು : ಭ್ರಷ್ಟಾಚಾರ ವಿರುದ್ಧದ ಹೋರಾಟದಲ್ಲಿ ಈಗ ನಾವು ಗೆದ್ದಂಗಾಯ್ತಲ್ಲವೇ?

ಶಿವಲಿಂಗ : ಗೆಲ್ಲುದೇನು ಮೇಷ್ಟರೇ, ನಮ್ಮೂರಿನಲ್ಲೇ ಒಂದು ಹೊಸ ಕ್ರಾಂತಿ ಆದಂಗಾಯ್ತು.

ಚನ್ನೇಗೌಡ : ಎಲ್ಲಾ ಕಡೇನು ಹಿಂಗಾದ್ರೆ, ಭ್ರಷ್ಟಾಚಾರ ಅನ್ನೋದು ಬುಡ ಸಮೇತ ಹೋಗ್ದೆ ಏನ್ಮಾಡುತ್ತೆ?

ರಾಜಣ್ಣ : ಅದು ಸುಮ್‌ಸುಮ್ನೆ ಹೋಗಲ್ಲ. ನಮ್ಮ ಹಾಗೆ ಸಂಘಟಿತರಾಗಿ ಹೋರಾಡ್ಬೇಕು. ಆಗ ನೋಡಪ್ಪ, ಏನ್ಬೇಕಾದ್ರು ಸಾಧಿಸಬಹುದು.

ಮೇಷ್ಟ್ರು : ನಿಮ್ಮೆಲ್ಲರ ಸಂತೋಷ ಕಂಡು, ನಂಗೂ ಬಹಳ ಸಂತೋಷವಾಯ್ತು. ಈ ಸಂದರ್ಭದಲ್ಲಿ ನಿಮ್ಮೆಲ್ಲರಿಗೂ ಒಂದು ಪ್ರಶ್ನೆ ಕೇಳ್ತೀನಿ. ಅದಕ್ಕೆ ನೀವೆಲ್ಲಾ ಸರಿಯಾಗಿ ಉತ್ತರ ಹೇಳ್ಬೇಕಲ್ಲ.

ಶಿವಲಿಂಗ : ಏನ್ ಮೇಷ್ಟ್ರೆ, ಇದೇನು ಸ್ಕೂಲ್ ಮನೆ ಅಂತ ತಿಳ್ಕೊಂಡ್ರ! ಹೈಕ್ಳಗೆ ಪ್ರಶ್ನೆ ಕೇಳ್ದಂಗೆ ಕೇಳ್ತೀರಾ?

ಮೇಷ್ಟ್ರು : ಅಲ್ಲಿ ಕೇಳೂ ಪ್ರಶ್ನೆಗಳೇ ಬೇರೆ. ಈಗ ಇಲ್ಲಿ ನಿಮ್ಮನ್ನು ಕೇಳುವ ಪ್ರಶ್ನೆಯೇ ಬೇರೆ.

ಚನ್ನೇಗೌಡ : ಅದೇನ್ ಕೇಳಿ ಮೇಷ್ಟ್ರೆ. ಗೊತ್ತಿದ್ರೆ ಹೇಳ್ತೀವಿ. ಗೊತ್ತಿಲ್ದೇದ್ರೆ ಇಲ್ಲ ಅಂತೀವಿ. ಹೇಳದೆ ಇದ್ರೆ, ನೀವೇನು ಕೋಲ್ ತಕೊಂಡು ಹೊಡೆಯೂಕಾದದೆ ನಮ್ಮ!

ಮೇಷ್ಟ್ರು : [ಡಾಕ್ಟರ್ ಕಡೆಗೆ ಕೈ ತೋರಿಸುತ್ತಾ]

ನೋಡಿ, ಈ ಡಾಕ್ಟರು ಜನರಿಗೆ ದ್ರೋಹ ಮಾಡಿ, ಲಂಚದ ಹಣ ಕೀಳ್ತಿರುವಂಗೆ, ನಮ್ಮ ನಿಮ್ಮ ಮನೆಗಳಲ್ಲಿ ಅಂದರೆ.... ನಮ್ಮ ಅಣ್ಣತಮ್ಮಂದಿರಲ್ಲಿ, ನಮ್ಮ ತಂದೆ ತಾಯಿಗಳಲ್ಲಿ, ನಮ್ಮ ಬಂಧುಬಳಗದಲ್ಲಿ ಯಾರು ಭ್ರಷ್ಟಾಚಾರಿಗಳಿಲ್ಲವೇ?

[ಮೇಷ್ಟ್ರರ ಈ ಮಾತುಗಳನ್ನು ಕೇಳಿದ ಕೂಡಲೇ, ಮೂವರು ಕ್ಷಣಕಾಲ ತಬ್ಬಿಬ್ಬಾಗುತ್ತಾರೆ. ಯಾರು ಉತ್ತರ ನೀಡದೆ ಮೌನವಾಗಿ ನಿಂತಿರುತ್ತಾರೆ]

ಯಾಕೆ? ಏನು ಮಾತಾಡ್ದೆ ನಿಂತ್ಬುಟ್ರಲ್ಲ! ಸ್ವಲ್ಪ ಹೊತ್ತು ಚೆನ್ನಾಗಿ ಆಲೋಚನೆ ಮಾಡಿ, ಜ್ಞಾಪಿಸಿಕೊಂಡು ಹೇಳಿ.

[ಈಗಲೂ ಮೂವರು ಪರಸ್ಪರ ಒಬ್ಬರು ಮತ್ತೊಬ್ಬರನ್ನು ನೋಡಿಕೊಳ್ಳುತ್ತಾ, ಮೌನದಿಂದಲೇ ಇರುತ್ತಾರೆ. ಪ್ರೇಕ್ಷಕರ ಕಡೆಗೆ ಕೈ ತೋರಿಸುತ್ತಾ ಮೇಷ್ಟ್ರು ಮಾತನ್ನು ಮುಂದುವರಿಸುತ್ತಾರೆ.]

ನೋಡಿ ನಮ್ಮ ಕಣ್ಣ ಮುಂದಿರುವ ಈ ಸಮಾಜವನ್ನೇ ಸಾಕ್ಷಿಯಾಗಿಟ್ಟುಕೊಂಡು ಮಾತಾಡೋಣ. ಒಂದಲ್ಲ ಒಂದು ರೀತಿಯಲ್ಲಿ ಸಮಾಜದ ಋಣದಲ್ಲಿ ಬದುಕಾಯ್ತಿರುವ ನಾವು, ಈ ಸಮಾಜದ ಮುಂದೆ ಸುಳ್ಳಾಡುದು ಬೇಡ. ಮೊದಲು, ನಾನೇ ನನ್ನ ಮನೇದನ್ನ ಹೇಳ್ತೀನಿ. ಅನಂತರ ನೀವು ಒಬ್ಬೊಬ್ಬರಾಗಿ ನಿಮ್ಮ ಮನೇದನ್ನ ಹೇಳಿ.
[ರಂಗದ ಒಂದು ನಿರ್ದಿಷ್ಟ ಸ್ಥಳಕ್ಕೆ ಬಂದು ನಿಂತು, ಪ್ರೇಕ್ಷಕರನ್ನು ನೋಡುತ್ತಾ, ಹೇಳತೊಡಗುತ್ತಾರೆ.]

ನನ್ನ ದೊಡ್ಡ ಮಗ ನಗರದ ಕಾಲೇಜ್ನಲ್ಲಿ ಲೆಕ್ಚರರ್ ಆಗವ್ನೆ. ವಿದೇಶಿ ವಿದ್ಯಾರ್ಥಿಗಳಿಗೆ ಪಾಠ ಹೇಳ್ಕೊಡುವ ನೆಪದಲ್ಲಿ ಅವರನ್ನು ಹತ್ತಿರಕ್ಕೆ ತಕೊಂಡು, ಅವರ ಪೇಪರ್ ರಿಪೇರಿಯಿಂದ ಹಿಡಿದು, ಅವರು ಡಿಗ್ರಿ ತೆಗೆದುಕೊಳ್ಳುವ ತನಕ, ಮಾಡಬಾರದ ಅವ್ಯವಹಾರಗಳನ್ನು ಮಾಡ್ತಾ, ಲಕ್ಷಾಂತರ ರೂಪಾಯಿ ಸಂಪಾದ್ನೆ ಮಾಡ್ತಾವ್ನೆ. ಕೆಲಸಕ್ಕೆ ಸೇರಿದ ಆರೇ ವರ್ಷದಲ್ಲಿ ನಗರದಲ್ಲಿ ಎಂಟು ಲಕ್ಷ ಬೆಲೆ ಬಾಳುವ ಮನೆ ಮಾಡವ್ನೆ; ನಾಲ್ಕು ಸೈಟು ತೆಗೆದು ಬುಟ್ಟವ್ನೆ; ಕಾರು ಇಟ್ಟವ್ನೆ; ಸಾವಿರ ಅಂದ್ರೆ ಅವನ್ಗೆ ಲೆಕ್ಕವೇ ಇಲ್ಲ. ನೀರ್ನಂಗೆ ದುಡ್ಡ ಖರ್ಚು ಮಾಡ್ತಾವ್ನೆ. ಆದ್ರೆ ಅವನ ತಿಂಗಳ ಸಂಬಳ ಎಷ್ಟು ಗೊತ್ತ? ಕೇವಲ ಆರು ಸಾವಿರ ರೂಪಾಯಿ ಮಾತ್ರ.
[ಮೇಷ್ಟ್ರು ತಾವು ನಿಂತಿದ್ದ ಜಾಗದಿಂದ ಹಿಂದಕ್ಕೆ ಸರಿದು ನಿಲ್ಲುತ್ತಾರೆ. ಈಗ ಆ ಜಾಗಕ್ಕೆ ಶಿವಲಿಂಗ ಬಂದು ನಿಂತು ಪ್ರೇಕ್ಷಕರನ್ನು ನೋಡುತ್ತಾ, ನುಡಿಯತೊಡಗುತ್ತಾನೆ.]

ಶಿವಲಿಂಗ : ನಮ್ಮಣ್ಣ ಓದೂದರಲ್ಲಿ ಬಹಳ ಬುದ್ಧಿವಂತ. ಮೊದ್ಲು ಕೆ.ಎ.ಎಸ್., ಪಾಸ್ ಮಾಡ್ದ. ದೊಡ್ಡ ಆಫೀಸರ್ ಆಗಿ ಹನ್ನೆರಡು ವರ್ಷ ಆಗಿದೆ. ಅವನ್ಗೆ ಒಂದಲ್ಲ, ಎರಡು ಸಂಸಾರ ಅವೆ. ಒಟ್ಟು ಐದು ಮಕ್ಕಳು.... ಹೆಡ್ತೀರು.... ಮಕ್ಳ ಹೆಸರಿನಲ್ಲಿ ಅವನು ಮಾಡೀರು ಆಸ್ತಿಗೆ, ಇಟ್ಟೀರು ಚಿನ್ನದ ಒಡವೆಗೆ, ದುಡ್ಡಿಗೆ ಲೆಕ್ಕವೇ ಇಲ್ಲ. ಬೆಂಗಳೂರಲ್ಲಿ ಮೂರು, ಮೈಸೂರಲ್ಲಿ ಎರಡು ಬಂಗ್ಲೆಗಳನ್ನು ಕಟ್ಟಿಸವ್ನೆ.

[ಶಿವಲಿಂಗ ಅಲ್ಲಿಂದ ತಾನು ಮೊದಲು ನಿಂತಿದ್ದ ಜಾಗಕ್ಕೆ ಹೋಗಿ ನಿಲ್ಲುತ್ತಾನೆ. ಈಗ ಈ ಜಾಗಕ್ಕೆ ಚನ್ನೇಗೌಡ ಬಂದು ನಿಂತು, ಪ್ರೇಕ್ಷಕರ ಕಡೆಗೆ ನೋಡುತ್ತ, ನುಡಿಯತೊಡಗುತ್ತಾನೆ]

ಚನ್ನೇಗೌಡ : ನಮ್ಮ ಅಕ್ಕನ ಗಂಡ, ಬೋ ದೊಡ್ಡ ಕೆಲಸದಲ್ಲವ್ನೆ. ರಾಜ್ಯದ ಹಣಕಾಸಿನ ನಿಗಮವೊಂದಕ್ಕೆ ಛೇರ್ಮನ್ ಆಗವ್ನೆ. ಕೋಟಿಗಟ್ಟಲೆ ಸಾಲ ವಿತರಣೆ ಮಾಡುವ ಅಧಿಕಾರ ಅವನ ಕೈಯಲ್ಲಿ ಇದೆ. ಮಾಮೂಲಿ ಪರ್ಸಂಟೇಜ್ ರೂಪದಲ್ಲಿ, ಏನಿಲ್ಲ ಅಂದರೂ ಒಂದು ವರ್ಷಕ್ಕೆ ಇಪ್ಪತ್ತೈದರಿಂದ ಐವತ್ತು ಲಕ್ಷ ಹಣ ಬತ್ತದೆ. ಬೇನಾಮಿಯಾಗಿ ನಮ್ಮ ಭಾವ ಮಾಡೀರು ಆಸ್ತಿಪಾಸ್ತಿಗೆ, ಇಟ್ಟರೂ ಒಡವೆದುಡ್ಗೆ ಯಾವ ಲೆಕ್ಕವೂ ಇಲ್ಲ, ಬುಕ್ಕೂ ಇಲ್ಲ. ಹೆಗ್ಗಡದೇವನಕೋಟೆ ಹತ್ತಿರ ನೂರೈವತ್ತು ಎಕರೆ ಚಿನ್ನದಂಥ ಭೂಮೀನಾ ಒಂದೇ ಬೌಂಡ್ರೀಲಿ ಮಾಡವ್ನೆ.

(ಚನ್ನೇಗೌಡ ಅಲ್ಲಿಂದ ತಾನು ಮೊದಲು ನಿಂತಿದ್ದ ಜಾಗಕ್ಕೆ ಹೋಗಿ ನಿಲ್ಲುತ್ತಾನೆ. ಈಗ ಆ ಜಾಗಕ್ಕೆ ರಾಜಣ್ಣ ಬಂದು ನಿಂತು ಪ್ರೇಕ್ಷಕರ ಕಡೆಗೆ ನೋಡುತ್ತಾ, ನುಡಿಯತೊಡಗುತ್ತಾರೆ]

ರಾಜಣ್ಣ : ನನ್ನ ಷಟಕ.... ಅಂದ್ರೆ ನನ್ನ ಹೆಂಡತಿ ಅಕ್ಕನ ಗಂಡ.... ನಮ್ಮ ರಾಜ್ಯದಲ್ಲೇ ಹೆಸರಾಂತ ರಾಜಕಾರಣಿ. ಎರಡು ಸಾರಿ ಎಂ.ಎಲ್.ಎ., ಆಗಿದ್ರು. ಎರಡನೆಯ ಅವಧಿಯಲ್ಲಿ ಮೂರು ವರ್ಷ ಮಂತ್ರಿನೂ ಆಗಿದ್ರು. ಮೊದಲನೆ ಸತಿ ಅವರು ಚುನಾವಣೆಗೆ ನಿಂತಾಗ, ನಾವೇ ನೆಂಟರಿಸ್ಟರೆಲ್ಲಾ ಸೇರಿ ಐನೂರು ಸಾವಿರ ಅಂತ ಕೈನಿಂದ ಹಾಕಿ, ಎಲೆಕ್ಷನ್ ಖರ್ಚಿಗೆ ಕೊಟ್ಟಿದ್ದೊ. ಮೊದಲು ಎಂ.ಎಲ್.ಎ. ಆಗಿದ್ದಾಗ ಅಂಥಾ ಸಂಪಾದ್ನೆ ಮಾಡಿರ್ಲಿಲ್ಲ. ಆಮೇಲೆ ಮಂತ್ರಿ ಆದ್ಮೇಲೆ, ಅದೇನ್ ಮನಸ್ಸು ಬಂತೊ ಏನ್ ಕತೆಯೋ? ಮಾಡುದ್ರು.... ಮಾಡುದ್ರು ದುಡ್ಡನ್ನ.... ಈಗ ಅವರ ಮುಂದಿನ ಮೂರು ತಲಮಾರು ಕುತ್ಕೊಂಡು ಉಂಡ್ರು, ಕರಗದಷ್ಟು

ಆಸ್ತಿ ಹಣ ಸಂಪಾದ್ನೆ ಮಾಡವ್ರೆ. ಒಬ್ಬೊಬ್ಬ ಮಗಳ ಮದುವೆಗೆ ಏನಿಲ್ಲ ಅಂದ್ರು ಹತ್ತತ್ತು ಲಕ್ಷ ಖರ್ಚು ಮಾಡಿ, ಎಲ್ಲಾ ಐದು ಹೆಣ್ಮಕ್ಳು ಮದುವೇನೂ ಮಂತ್ರಿಯಾಗಿದ್ದಾಗ್ಲೆ ಮಾಡಿ ಮುಗಿಸ್ಬುಟ್ರು. ಈಗ ಕೋಟಿಗಟ್ಟಲೆ ಆಸ್ತಿ ಮೇಲೆ ಕುಂತ್ಕೊಂಡು ಮಕ್ಳು ಮೊಮ್ಮಕ್ಳು ಜೊತೆ ಆನಂದವಾಗವ್ರೆ.

[ರಾಜಣ್ಣನವರು ಅಲ್ಲಿಂದ ತಾವು ಮೊದಲು ನಿಂತಿದ್ದ ಜಾಗಕ್ಕೆ ಬಂದು ನಿಲ್ಲುತ್ತಾರೆ. ಮೇಷ್ಟ್ರು ಮತ್ತೆ ಆ ಮೂವರನ್ನು ಕುರಿತು]

ಮೇಷ್ಟ್ರು : ನಾನಾಗ್ಲಿ.... ನೀವಾಗ್ಲಿ.... ನಮ್ಮ ನಮ್ಮ ಕುಟುಂಬಗಳಲ್ಲೆ ಇರುವ, ಈ ಭ್ರಷ್ಟಾಚಾರಿಗಳ ವಿರುದ್ಧ, ಈ ರೀತಿ ಜನ ಕಟ್ಕೊಂಡು, ಯಾವತ್ತಾದ್ರು ಧಿಕ್ಕಾರ ಹಾಕಿದ್ದೀವಾ? ರಸ್ತೆಗೆ ಬಂದು ಅರಚಾಡಿದ್ದೀವಾ?

[ಮೂವರು ಸುಮ್ಮನಿರುತ್ತಾರೆ]

ಮಾತಾಡಿ, ಈ ಡಾಕ್ಟರ ವಿರುದ್ಧ ದೊಡ್ಡದಾಗಿದ್ದ ನಮ್ಮೆಲ್ಲರ ಗಂಟ್ಲು, ಈಗ ಎಲ್ಲಿ ಹೋಯ್ತು?

ರಾಜಣ್ಣ : ಇದೇನ್ ಮೇಷ್ಟ್ರೆ? ನಮ್ಮ ವಿರುದ್ಧಾನೆ ಮಾತಾಡೂಕೆ ಶುರು ಮಾಡುದ್ರಿ?

ಮೇಷ್ಟ್ರು : "ನಮ್ಮ ವಿರುದ್ಧ ನಾವು ಎಷ್ಟೆಷ್ಟು ಯೋಚನೆ ಮಾಡೋದನ್ನ ಕಲಿತೀವೊ, ಅಷ್ಟಷ್ಟರ ಮಟ್ಟಿಗೆ ನಾವು ಉತ್ತಮ ಮನುಷ್ಯರಾಗ್ತೀವಿ" ಅಂತ ಕುವೆಂಪು ತಮ್ಮ ಮಗನಿಗೆ ಬುದ್ಧಿವಾದ ಹೇಳ್ತಿದ್ದರಂತೆ.

ರಾಜಣ್ಣ : ಹಂಗಂತ, ನಮ್ಮವರ ವಿರುದ್ಧಾನೆ, ನಾವೇ ಬಹಿರಂಗವಾಗಿ ತಿರುಗಿ ಬೀಳೋಕಾಗುತ್ತ?

ಮೇಷ್ಟ್ರು : ಅಂದ್ರೆ, ನಮ್ಮೋರು ಮಾಡೊ ಭ್ರಷ್ಟಾಚಾರ ನೋಡ್ಕೊಂಡು ಸುಮ್ಮನಿರೋದು; ಅನ್ಯರು ಮಾಡೊ ಭ್ರಷ್ಟಾಚಾರ ಕಂಡು, ಆಕ್ರೋಶಗೊಂಡು ಹೋರಾಡೂದು, ಇದೇ ತಾನೆ ನನ್ನ ನಿಮ್ಮ ನಿಲುವು?

ಶಿವಲಿಂಗ : ಹಂಗಲ್ಲ ಮೇಷ್ಟ್ರೆ....

ಮೇಷ್ಟ್ರು : ಇನ್ನೆಂಗಯ್ಯ? ನೀನು ನಿಮ್ಮ ಅಣ್ಣನ ಲಂಚಕೋರತನ ಸಹಿಸಿಕೊಂಡು ಸುಮ್ಮನಿರುವಂಗೆ, ನಾನು ನನ್ನ ಮಗನ ಅವ್ಯವಹಾರ ನೋಡ್ಕೊಂಡು

ತೆಪ್ಪಗಿರುವಂಗೆ, ಈ ಡಾಕ್ಟರ ಭ್ರಷ್ಟಾಚಾರನ ಯಾಕೆ ನಮ್ಮ ಕೈಲಿ ಸಹಿಸಿಕೊಳ್ಳೊಕಾಯ್ತಿಲ್ಲ?

ಚನ್ನೇಗೌಡ : ಮೇಷ್ಟ್ರು ಹೇಳು ಮಾತಲ್ಲೂ ಸತ್ಯ ಅದೆ. ಆದರೆ....

ಮೇಷ್ಟ್ರು : ಆದರೆ ಅಂದರೆ ಏನಯ್ಯ? ನೋಡಿ, ನೀವೆಲ್ಲಾ ಈಗ ನನ್ನ ಮಾತಿಗೆ ಒಬ್ಬೊಬ್ಬರಾಗಿ ಉತ್ತರ ಕೊಡಿ.

[ಒಬ್ಬೊಬ್ಬರ ಬಳಿಗೆ ಮೇಷ್ಟ್ರು ಬಂದು, ಪ್ರಶ್ನೆ ಹಾಕುತ್ತಾ, ಮುಂದೆ ನಡೆಯುತ್ತಾರೆ. ಮೊದಲು ಶಿವಲಿಂಗನನ್ನು ಕುರಿತು....]

ಮೇಷ್ಟ್ರು : ಬ್ಲೇಡ್ ಹಾಕಿ ಪಿಕ್ ಪಾಕೆಟ್ ಮಾಡೋರ್‍ನ ನಾವು ಏನಂತ ಕರೀತಿವಿ?

ಶಿವಲಿಂಗ : "ಕಳ್ಳರು"

ಮೇಷ್ಟ್ರು : ರಾತ್ರಿ ಹೊತ್ತು ಹಾರೆ ಮಚ್ಚು ಕೊಡ್ಲಿ ಹಿಡ್ಕೊಂಡು ಬಂದು, ಮನೆ ಬಾಗಿಲ್ಗೆ ದಿಂಡ್ಗಲ್ ಎತ್ತಾಕಿ, ಲೂಟಿ ಹೊಡಿಯೂರ್‍ನ?

ಚನ್ನೇಗೌಡ : "ದರೋಡೆಕೋರರು"

ಮೇಷ್ಟ್ರು : ಅಧಿಕಾರದ ಸೀಟ್ನಲ್ಲಿ ಕುತ್ಕೊಂಡು, ಲೇಖನಿ ಹಿಡ್ಕೊಂಡು, ಹಾಡುಹಗಲೆ ಜನಗಳನ್ನ ಸುಲಿಗೆ ಮಾಡ್ತಾಯಿರೋ ರಾಜಕಾರಣಿಗಳನ್ನ... ಸರ್ಕಾರಿ ನೌಕರರನ್ನ ನಾವು ಏನಂತ ಕರೀತಿವಿ?

ರಾಜಣ್ಣ : "ದೊಡ್ಡೋರು" ಅಂತೀವಿ.

ಶಿವಲಿಂಗ : "ಗಣ್ಯರು" ಅಂತೀವಿ.

ಚನ್ನೇಗೌಡ : "ಸನ್ಮಾನ್ಯರು" ಅಂತೀವಿ.

ಮೇಷ್ಟ್ರು : ಬರಿ ಅನ್ನೋದು ಅಷ್ಟೇ ಅಲ್ಲ. ಅವರ್‍ನ ನಾನು ನೀವು ತಲೆ ಮೇಲೆ ಹೊತ್ಕೊಂಡು ಮೆರಿಸ್ತೀವಿ; ಸನ್ಮಾನ ಮಾಡ್ತೀವಿ. ಹಾಗಾದ್ರೆ ನಾವು ಎಂಥವ್ರು? ಒಂದು ಉತ್ತಮ ಸಮಾಜಕ್ಕಾಗಿ ನಡೆಯುವ ಹೋರಾಟದ ಕಡೆಗೆ ನಾವು ಇದ್ದೀವಾ ಅಥವಾ ಅಂಥಾ ಕಳ್ಳರ ಕಡೆಗೆ ಇದ್ದೀವಾ? ನಿಜ ಹೇಳಿ ಹಿಂಜರಿಯಬೇಡಿ.

ರಾಜಣ್ಣ : ಬೇರೆಯವರ ಭ್ರಷ್ಟಾಚಾರ ಕಂಡಾಗ ಹೋರಾಟದ ಕಡೆಗೆ; ನಮ್ಮೋರ ಭ್ರಷ್ಟಾಚಾರ ಕಂಡಾಗ ಕಳ್ಳರ ಕಡೆಗೆ.

ಮೇಷ್ಟ್ರು : ಹಾಗಾದ್ರೆ ನಾನು ನೀವು ಏನಾಗಿದ್ದೀವಿ?

ಶಿವಲಿಂಗ : ಎರಡ್ತಲೆ ಹಾವಾಗಿದ್ದೀವಿ!

ಮೇಷ್ಟ್ರು : ಅಂಥಾ ಭ್ರಷ್ಟರಿಗೆ ನಮ್ಮ ಮೌನದಿಂದಲೋ.... ನಮ್ಮ ಮಾತಿನಿಂದಲೋ ಸಪೋರ್ಟ್ ಮಾಡ್ತಿರು ನಾವೆಲ್ಲಾ ಒಂಥರ ಕಳ್ಳರೇ ಅಲ್ಲವೇ?

ಚನ್ನೇಗೌಡ : ಕಳ್ಳರಿಗಿಂತ ಒಂದು ಕೈ ಕೀಳೇ ಅನ್ನಿ. ಯಾಕಂದ್ರೆ 'ಅತ್ತಗೆ ಇತ್ತಗೆ' ಎಲ್ಲಾ ಇರ್ತೀವಿ.

ಮೇಷ್ಟ್ರು : ನಾವು ಕಳ್ಳರು; ನಾವು ಸುಳ್ಳರು. ಆದ್ರೆ ನಮ್ಮ ಸಮಾಜ ಮಾತ್ರ ನ್ಯಾಯವಾಗಿರ್ಬೇಕು; ನಮ್ಮ ದೇಶ ರಾಮರಾಜ್ಯವಾಗ್ಬೇಕು ಅಂತ ಆದರ್ಶದ ಮಾತುಗಳನು ಆಡ್ತೀವಿ.

[ಪ್ರೇಕ್ಷಕರ ಕಡೆಗೆ ಕೈ ತೋರಿಸುತ್ತಾ]
ನಮ್ಮ ಕಣ್ಣ ಮುಂದಿನ ಈ ಸಮಾಜದ ಮನೋಧರ್ಮ ಹೆಂಗದೆ ಗೊತ್ತೆ, ನಿಮಗೆ?

ರಾಜಣ್ಣ : ಹೇಳಿ ಮೇಷ್ಟರೇ, ಇವತ್ತು ನಿಮಗೆ ಏನೇನು ಅನ್ಸುತ್ತೊ, ಅದೆಲ್ಲಾನು ಹೇಳ್ಬುಡಿ,

ಮೇಷ್ಟ್ರು : ಈ ಜನವೆಲ್ಲಾ "ಲಂಚ ಕೆಟ್ಟುದ್ದು" ಅಂತಾರೆ; ಆದರೆ ಲಂಚಕೋರರನ್ನ ಗೌರವಿಸ್ತರೆ. ಯಾವೊಬ್ಬ ಲಂಚಕೋರನನ್ನಾದರೂ ಯಾವತ್ತಾದ್ರು ಈ ಸಮಾಜ ನಿಕೃಷ್ಟವಾಗಿ ಕಂಡು, ಇಂಥಾವ್ನ ಬಗ್ಗೆ 'ಎಚ್ಚರಿಕೆಯಿಂದಿರಿ' ಅಂತ ಹೇಳಿದಿಯೆ?

ಚನ್ನೇಗೌಡ : ನಿಕೃಷ್ಟವಾಗಿ ಯಾಕೆ ಕಂಡರು? ತಮಗೆ, ತಮ್ಮ ಮಕ್ಕಳಿಗೆ, ಅಳಿಯಂದಿರಿಗೆ "ಮೇಲ್ ಸಂಪಾದ್ನೆ ಇರುವಂಥ ಕೆಲ್ಸ ಸಿಕ್ಕಿದರೆ ಸಾಕು" ಅಂತ ಬಾಯ್ಬಾಯ್ ಬುಡ್ತರೆ.

ಶಿವಲಿಂಗ : ನಾವು ಬ್ಯಾರೆ.... ನಮ್ಮ ಸಮಾಜ ಬ್ಯಾರೆಯೆ?

[ಪ್ರೇಕ್ಷಕರ ಕಡೆ ಕೈ ತೋರಿಸುತ್ತಾ]
ಇದು ನಮ್ಮಂಗೆ ಎರಡ್ತಲೆ ಹಾವು.

ಮೇಷ್ಟ್ರು : ಈಗ ನೀವು ಧಿಕ್ಕಾರ ಹಾಕ್ಬೇಕಾಗಿರೋದು.... ಈ ಡಾಕ್ಟರಿಗೆ ಮಾತ್ರ ಅಲ್ಲ. ಒಳಗೊಂದು ಬಣ್ಣ ಇಟ್ಕೊಂಡು, ಹೊರಗೊಂದು ಬಣ್ಣ ಬಳ್ಕೊಂಡು ಬದುಕ್ತಾಯಿರುವ ನಮಗೆ ಮತ್ತು ಈ ಸಮಾಜಕ್ಕೆ.

ಚನ್ನೇಗೌಡ : ಲೋ ಶಿವಲಿಂಗ, ಮೇಷ್ಟ್ರು ಹೇಳು ಮಾತು ಸತ್ಯ ಕಲ. ಅವರು ಹೇಳ್ದಂಗೆ ಹಾಕ್ಲ ಧಿಕ್ಕಾರವ....

[ತನ್ನ ಸಂಗಡಿಗರಿಗೆ ಶಿವಲಿಂಗನು ಧಿಕ್ಕಾರವನ್ನು ಹಾಕಲು ಸೂಚಿಸಿ, ಘೋಷಣೆಗಳನ್ನು ಕೂಗಲು ಪ್ರಾರಂಭಿಸುತ್ತಾನೆ. ಸಂಗಡಿಗರೆಲ್ಲರೂ ವೃತ್ತಾಕಾರವಾಗಿ ರಂಗದಲ್ಲಿ ನಿಧಾನವಾಗಿ ಹೆಜ್ಜೆ ಇಡುತ್ತ, ಗಂಭೀರವಾದ ಧ್ವನಿಯಲ್ಲಿ ಧಿಕ್ಕಾರ ಹಾಕತೊಡಗುತ್ತಾರೆ.]

ಶಿವಲಿಂಗ : [ತನ್ನ ಎದೆಯ ಕಡೆಗೆ ಕೈ ತೋರಿಸಿಕೊಳ್ಳುತ್ತ ಗಂಭೀರವಾದ ಧ್ವನಿಯಿಂದ] ಇಬ್ಬಗೆಯ ಧೋರಣೆಯುಳ್ಳ ನಮಗೆ....

ಸಂಗಡಿಗರು : ಧಿಕ್ಕಾರ.

ಶಿವಲಿಂಗ : ಇಬ್ಬಗೆಯ ಧೋರಣೆಯುಳ್ಳ ನಮಗೆ....

ಸಂಗಡಿಗರು : ಧಿಕ್ಕಾರ.

ಚನ್ನೇಗೌಡ : [ಪ್ರೇಕ್ಷಕರ ಕಡೆಗೆ ಕೈ ತೋರಿಸುತ್ತಾ] ಇಬ್ಬಗೆಯ ನೀತಿಯುಳ್ಳ ಈ ಜನರಿಗೆ....

ಸಂಗಡಿಗರು : ಧಿಕ್ಕಾರ.

ಚನ್ನೇಗೌಡ : ಇಬ್ಬಗೆಯ ನೀತಿಯುಳ್ಳ ಈ ಸಮಾಜಕ್ಕೆ....

ಸಂಗಡಿಗರು : ಧಿಕ್ಕಾರ.

[ಶಿವಲಿಂಗನು ಮತ್ತು ಚನ್ನೇಗೌಡ ಘೋಷಣೆಗಳನ್ನು ಕೂಗುತ್ತಾ, ಸಂಗಡಿಗರು ಧಿಕ್ಕಾರ ಹಾಕುತ್ತಾ ರಂಗದಲ್ಲಿ ಒಂದೆರಡು ಸುತ್ತ ಬರುತ್ತಿದ್ದಂತೆಯೇ, ರಂಗದ ತುಂಬೆಲ್ಲಾ ಘೋಷಣೆ ಮತ್ತು ಧಿಕ್ಕಾರದ ಧ್ವನಿ ವ್ಯಾಪಿಸುತ್ತಿದ್ದಂತೆಯೇ ರಂಗದ ಮೇಲೆ ಕತ್ತಲು ಆವರಿಸುತ್ತದೆ.]

❍

ಬರಹಗಾರ

ಹೆಸರು : ಸಿ.ಪಿ. ನಾಗರಾಜ

ತಾಯಿ : ಲಕ್ಷ್ಮಿದೇವಮ್ಮ, ಮದ್ದೂರು, ಮಂಡ್ಯ ಜಿಲ್ಲೆ.

ತಂದೆ : ಪುಟ್ಟೇಗೌಡ, ಚೆಕ್ಕೆರೆ, ಚೆನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ.

ಓದು : ಎಂ.ಎ., ಪಿಎಚ್.ಡಿ.

ಕೆಲಸ : ಕನ್ನಡ ಉಪನ್ಯಾಸಕ

1971-72 ಅರ್ಜುನಪುರಿ ಕಾಲೇಜು, ಮದ್ದೂರು, ಮಂಡ್ಯ ಜಿಲ್ಲೆ.

1972-2003 ಭಾರತಿ ಕಾಲೇಜು, ಕಾಳಮುದ್ದನ ದೊಡ್ಡಿ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ.

2006-ಸ್ನಾತಕೋತ್ತರ ಕೇಂದ್ರ, ಮಹಾರಾಣಿ ಲಕ್ಷ್ಮಿ ಅಮ್ಮಣ್ಣಿ ಮಹಿಳಾ ಕಾಲೇಜು, ಮಲ್ಲೇಶ್ವರಂ, ಬೆಂಗಳೂರು.

ನಾಟಕ :

ಭಾಗೀರಥಿ
ಅಂಬೆ
ಹಾವು
ಅಂಗಿ ಬಟ್ಟೆ
ಒಂದು ರೂಪಾಯಿ
ಕಳ್ಳರಿದ್ದಾರೆ... ಎಚ್ಚರಿಕೆ
ಹೆಣದ ಹಣ

ಗದ್ಯ :

ಹಳ್ಳಿಗಾಡಿನ ರೂವಾರಿ
ಡಾ.ಬಂದೀಗೌಡ
ಆಣೆ ಪ್ರಮಾಣಗಳು
ಬಯ್ಗುಳ
ಸರ್ವಜ್ಞ ವಚನಗಳ ಓದು
ಅಲ್ಲಮ ವಚನಗಳ ಓದು
ಶಿವಶರಣಶರಣೆಯರ ವಚನಗಳ ಓದು
ಶಿವಶರಣರ ವಚನಗಳ ಓದು
ಬಸವಣ್ಣ ವಚನಗಳ ಓದು
ಮುದ್ದೆಗಂಟು

ವಿಳಾಸ : ಸಿ.ಪಿ. ನಾಗರಾಜ, 75, 'ಎ' ಬ್ಲಾಕ್, 5 ನೆಯ ಕ್ರಾಸ್, ಕ್ರಿಶ್ಣ ಗಾರ್ಡನ್, ಆರ್.ವಿ.ಕಾಲೇಜು ಪೋಸ್ಟ್, ಬೆಂಗಳೂರು-560059. ಮೊ.9986347521. ngy7777@gmail.com